
ಬೆಲೆ ರೂ.2.50
D.O.P - 15th of every month at Udupi Sorting Office




# ಶ್ರೀ ಶಾರದಾ

ಮಾಸಪತ್ರಿಕೆ – 15 ಜೂನ್ 2018

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-18 ಸಂಚಿಕೆ-6 ಪುಟಗಳು-8 Registered Under No.UDP/1260/2018-2020 Licenced to Post without Prepayment Licence No. SK/WPP/UDP/81/2018-20

## ಪೊಳಲಿಯಲ್ಲಿ ಉಡುಪಿಯ ಮಹಿಳಾವೇದಿಕೆಯಿಂದ ಭಜನಾ ಕಾರ್ಯಕ್ರಮ



ಪೊಳಲಿ ಶ್ರೀ ರಾಜರಾಜೇಶ್ವರಿ ದೇವಸ್ಥಾನವು ಜೀರ್ಣೋದ್ಧಾರಗೊಳ್ಳುತ್ತಿದ್ದು ಈ ಸಂದರ್ಭದಲ್ಲಿ ಉಡುಪಿ ಹಾಗೂ ದಕ್ಷಿಣಕನ್ನಡ ಜಿಲ್ಲೆಯ ವಿವಿಧ ಭಜನಾ ತಂಡಗಳಿಂದ ಭಜನಾ ಸೇವೆಯು ಪ್ರತಿನಿತ್ಯವೂ ಜರಗುತ್ತಿದೆ. ಅಂತೆಯೇ ಉಡುಪಿಯ ಸ್ಥಾನಿಕ ಬ್ರಾಹ್ಮಣ ಸಂಘದ ಮಹಿಳಾವೇದಿಕೆಯ ಸದಸ್ಯೆಯರು ತಾ.06-06-2018ರಂದು ಪೊಳಲಿಗೆ ತೆರಳಿ ಭಜನಾಸೇವೆಯನ್ನು ಸಲ್ಲಿಸಿ ಕೃತಾರ್ಥರಾದರು. ಪೊಳಲಿ ರಾಜರಾಜೇಶ್ವರಿ ದೇವಸ್ಥಾನವನ್ನು ನಟ್ಟೋಜ ಮನೆತನದವರು ಕಟ್ಟಿಸಿದ್ದೆಂದು ತಮ್ಮ ತುಳುನಾಡು ಪುಸ್ತಕದಲ್ಲಿ ಪ್ರೊಫಸರ್ ಡಾ। ಪಾದೂರು ಗುರುರಾಜಭಟ್ಟರು ತಿಳಿಸಿದ್ದಾರೆ. ಅಲ್ಲದೇ ನಮ್ಮ ಸಮಾಜದ ಹಲವಾರು ಕುಟುಂಬಗಳು ಪೊಳಲಿ ದೇವಸ್ಥಾನದೊಂದಿಗೆ ನಿಕಟ ಸಂಪರ್ಕ ಹೊಂದಿವೆ. ಅನೇಕ ಸಮಾಜ ಬಾಂಧವರು ಜೀರ್ಣೋದ್ಧಾರಕ್ಕೂ ತಮ್ಮ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀಮತಿ ಮಹಾಲಕ್ಷ್ಮೀ, ಶ್ರೀಮತಿ ಮಮತೆ, ಶ್ರೀಮತಿ ಉಷಾ ಶ್ಯಾನುಭೋಗ್, ಶ್ರೀಮತಿ ಉಷಾ ಮೋಹನ್‌ದೇವ್, ಶ್ರೀಮತಿ ಜಯಲಕ್ಷ್ಮೀ ಮುರಲೀಧರ ರಾವ್, ಶ್ರೀಮತಿ ಹರಿಣಾಕ್ಷಿ ನಾಗರಾಜ್, ಶ್ರೀಮತಿ ಹರಿಣಾಕ್ಷಿ ರಾವ್, ಶ್ರೀಮತಿ ಗೀತಾ ರಾವ್, ಶ್ರೀಮತಿ ಮೀರಾ ಆರ್.ರಾವ್, ಶ್ರೀಮತಿ ಅನ್ನಪೂರ್ಣ, ಶ್ರೀಮತಿ ವಿದ್ಯಾ ರಾವ್, ಶ್ರೀಮತಿ ಸುನಂದ ರಾವ್, ಶ್ರೀಮತಿ ನಾಗವಲ್ಲಿ ಸುರೇಶ್ ರಾವ್, ಶ್ರೀಮತಿ ಶಂಕರಿ ರಾವ್, ಸಂಘದ ಕಾರ್ಯದರ್ಶಿಗಳಾದ ಶ್ರೀ ಕೆ.ಸುರೇಶ್ ರಾವ್ ಹಾಗೂ ಶ್ರೀ ಮೋಹನ್‌ದೇವ್ ಮತ್ತು ಇತರ ಭಜಕರು ಭಾಗವಹಿಸಿದ್ದರು. ಪೊಳಲಿಯ ಶ್ರೀ ಸುಬ್ಬರಾವ್ ಮತ್ತು ಶ್ರೀಮತಿ ಪ್ರಸುಮಾ ರಾವ್ ದಂಪತಿಗಳು ಭಜನಾ ತಂಡದವರನ್ನು ಸ್ವಾಗತಿಸಿ ಸತ್ಕರಿಸಿದರು. ಅವರ ಪುತ್ರಿ ಕು। ಸುಪ್ರೀತಾ ಹಾಗೂ ಪುತ್ರ ಶ್ರೀ ಹರಿಕೃಷ್ಣ ಹಾರ್ಮೋನಿಯಂ ಮತ್ತು ತಬಲಾದಲ್ಲಿ ಸಹಕರಿಸಿದರು. ಸಂಜೆ 7-30ಕ್ಕೆ ಕಾರ್ಯಕ್ರಮವು ಮುಕ್ತಾಯವಾಯಿತು. ದೇವಸ್ಥಾನದ ಮೊಕ್ತೇಸರರು ಭಜನಾ ತಂಡದ ಸದಸ್ಯೆಯರಿಗೆ ಪ್ರಸಾದವಿತ್ತು ಗೌರವಿಸಿದರು.

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಸಾಹಿತ್ಯೋತ್ಸವ, ಕ್ರೀಡೋತ್ಸವ



ಮೇ ತಿಂಗಳ ಕೊನೆಯ ವಾರದಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವಿಶಿಷ್ಟವಾದ ಹಾಗೂ ಮಾದರಿಯಾದ ಕಾರ್ಯಕ್ರಮವು ಜರಗಿತು. ಅದೇ ಸಾಹಿತ್ಯೋತ್ಸವ ಹಾಗೂ ಕ್ರೀಡೋತ್ಸವ. ನಮ್ಮ ಸಮಾಜದ ಹಿರಿಯ- ಕಿರಿಯ , ಖ್ಯಾತ- ಉದಯೋನ್ಮುಖರೆಂಬ ಭೇದವಿಲ್ಲದೆ ಬರೆಯುವ ಹವ್ಯಾಸವುಳ್ಳ ಪ್ರತಿಯೊಬ್ಬರನ್ನು ಗುರುತಿಸಿ- ಆಹ್ವಾನಿಸಿ, ಕೆಲವರನ್ನು ಸಮ್ಮಾನಿಸಿ, ಕೆಲವರಿಂದ ಅನಿಸಿಕೆಗಳನ್ನು ಹೊರಹಾಕಿಸಿ, ಕೆಲವರ ಪ್ರತಿಭೆಗಳನ್ನು ಸಭೆಯಲ್ಲೇ ಒರೆಗೆಹಚ್ಚಿ ನೋಡಿದ ವಿಶೇಷ ಕಾರ್ಯಕ್ರಮವಿದು. ಮಂಗಳೂರಿನ ಸಮಾಜಬಾಂಧವರ ಉತ್ಸುಕತೆಯಿಂದ ಮೂಡಿಬಂದ ಕಾರ್ಯಕ್ರಮ, ಅದುವೇ ಸಾಹಿತ್ಯೋತ್ಸವ. ತಾ.26.05.2018 ರಂದು ಬೆಳಿಗ್ಗೆ ಶ್ರೀ ಅನಂತಪುರ ಈಶ್ವರಯ್ಯ, ಶ್ರೀ ಕೆ. ಪ್ರಭಾಕರ ರಾವ್, ಶ್ರೀ ಬಿ.ಹೆಚ್.ವಿ. ಪ್ರಸಾದ್. ಶ್ರೀ ಹರಪ್ರಸಾದ್ ತುದಿಯಡ್ಕ ಶ್ರೀ ಕೊಯಿಲ ಮೋಹನ ರಾವ್‌ರವರ ಉಪಸ್ಥಿತಿಯಲ್ಲಿ ಉದ್ಘಾಟನೆಗೊಂಡಿತು. ಕಾರ್ಯಕ್ರಮದ ಮೊದಲಿಗೆ ಸುಬ್ರಹ್ಮಣ್ಯ ಸಭಾದ ಸದಸ್ಯರು ಗುಂಪಾಗಿ ಸುಶ್ರಾವ್ಯವಾಗಿ ನಾಡಗೀತೆಯನ್ನು ಹಾಡಿದರು. ಶ್ರೀ ಸಂಜಯ್ ಪಲಿಮಾರ್ ಇವರು ಸ್ವಾಗತ ಭಾಷಣವನ್ನು ಮಾಡಿದರು. ಕಾರ್ಯಕ್ರಮದ ರೂವಾರಿ ಶ್ರೀ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷ

(3ನೇ ಪುಟಕ್ಕೆ....)

## ಕುಟುಂಬಿಕರನ್ನು ಒಗ್ಗೂಡಿಸಿದ ಅಲೆವೂರು ಸಂತಾನದವರು ಸಾಮಾಜಿಕ ಸೇವೆಯಲ್ಲಿ ತೊಡಗಲಿ – ಎಮ್. ಪಾಲಚಂದ್ರರಾವ್



ಅಲೆವೂರು ಸಂತಾನದವರನ್ನು ಒಟ್ಟುಗೂಡಿಸಿ ಕುಟುಂಬಿಕರ ವಿಳಾಸ ಮಾಹಿತಿ ಪುಸ್ತಕವನ್ನು ಬಿಡುಗಡೆಗೊಳಿಸುತ್ತಿರುವುದು ಉತ್ತಮವಾದ ಕೆಲಸ. ಈ ಕಾರ್ಯಕ್ಕೆ ಶ್ರೀಯುತ ಅಲೆವೂರು ಪ್ರಭಾಕರರಾವ್ ಹಾಗೂ ಉದ್ಯಾವರ ಅರವಿಂದ ಕುಮಾರ್‌ರವರು ಪಟ್ಟ ಶ್ರಮವು ಈ ದಿನ ಸಾರ್ಥಕವಾಗಿದೆ. ಬೇರೆ ಬೇರೆ ಊರುಗಳಲ್ಲಿರುವ ಕುಟುಂಬಿಕರನ್ನು ಕಲೆ ಹಾಕಿ ಫೋಟೊ ಮಾಹಿತಿ, ವಿಳಾಸಗಳನ್ನು ಪ್ರಕಟಿಸುತ್ತಿರುವುದು ನಿಜಕ್ಕೂ ಶ್ಲಾಘನೀಯವಾಗಿದೆ. ಅವರ ಈ ಕೆಲಸಕ್ಕೆ ಶುಭವನ್ನು ಹಾರೈಸುತ್ತೇನೆ. ಮುಂದೆಯೂ ಸಮಾಜಕ್ಕೆ ಉಪಯುಕ್ತವಾಗುವ ಕೆಲಸಗಳನ್ನು ಮಾಡುವಂತಾಗಲಿ ಎಂದು ಶ್ರೀ ದೇವರಲ್ಲಿ ಪ್ರಾರ್ಥಿಸುತ್ತೇನೆ ಎಂದು ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಮಾಜಿ ಅಧ್ಯಕ್ಷ ಎಮ್. ಪಾಲಚಂದ್ರರಾಯರು ತಾ.15.5.2018ರಂದು ಶ್ರೀ ಪಿ.ಬಿ.ರಾಯರ ಮನೆಯಲ್ಲಿ ನಡೆದ "ಅಲೆವೂರು ಸಂತಾನ" ಪುಸ್ತಕ ಬಿಡುಗಡೆಯ ಉದ್ಘಾಟಕರಾಗಿ ಶುಭ ಹಾರೈಸಿದರು.

ಮುಖ್ಯ ಅತಿಥಿಗಳಾದ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಉಡುಪಿಯ ಅಧ್ಯಕ್ಷರಾದ ವೈ. ಭುವನೇಂದ್ರರಾಯರು ಮಾತನಾಡಿ ವಿಭಕ್ತ ಕುಟುಂಬಗಳಾಗಿ ಈಗಿನ ಪೀಳಿಗೆಯವರು ತಮ್ಮ ಕುಟುಂಬಿಕರ ಪರಿಚಯವಿಲ್ಲದಿರುವ ಈ ಸಂದರ್ಭದಲ್ಲಿ ಆರೇಳು ತಲೆಮಾರಿನ ಹಿಂದಿನವರ ಹಾಗೂ ಇತ್ತೀಚಿನ ಕುಟುಂಬದವರ ಪರಿಚಯ ಮಾಹಿತಿ ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸುತ್ತಿರುವುದು ಒಳ್ಳೆಯ ಕೆಲಸವಾಗಿದೆ. ಮುಂದಿನ ಪೀಳಿಗೆಯವರು ನೆನಪಿಸಿಕೊಳ್ಳುವಂತಹದಾಗಿದೆ ಎಂದು ನುಡಿದರು.

ಇನ್ನೋರ್ವ ಅತಿಥಿ ಡಾ.ಪಿ.ಜಿ.ರಾವ್ ಮಾತನಾಡಿ ಬೇರೆ ಬೇರೆ ಊರುಗಳಲ್ಲಿ ನೆಲೆಸಿರುವ ಅಲೆವೂರು ಸಂತಾನದವರನ್ನು ಹಾಗೂ ಮದುವೆಯಾದ ಹುಡುಗಿಯರ ಮಾಹಿತಿಗಳನ್ನು ಪ್ರಕಟಿಸಲು ಅವರನ್ನು ಸಂಪರ್ಕಿಸಿ ಪಡೆದಿರುತ್ತಾರೆ. ಮನೆ ಅಳಿಯನಾದ ನಾನು ಈ ಕಾರ್ಯಕ್ಕೆ ಅವರನ್ನು ಅಭಿನಂದಿಸುತ್ತೇನೆ ಎಂದರು.

ಪಾವಂಜೆ ಸುಬ್ರಹ್ಮಣ್ಯ ದೇವಸ್ಥಾನದ ಧರ್ಮದರ್ಶಿಗಳಾದ ಡಾ.ಎಚ್. ನಿರಂಜನ ಭಟ್ ಮಾತನಾಡಿ ನಿಮಗೆ ಕುಲದೇವರು ಬೇರೆಯೇ ಇದ್ದರೂ ಸ್ಥಾನಿಕ ಸಮಾಜಕ್ಕೆ ಸುಬ್ರಹ್ಮಣ್ಯ ಸ್ವಾಮಿಯೇ ದೇವರಾದುದರಿಂದ ಈ ಅಲೆವೂರು ಕುಟುಂಬಿಕರು ಸುಬ್ರಹ್ಮಣ್ಯನ ಆರಾಧಕರಾಗಿದ್ದಾರೆ ಎಂದು ಶುಭ ನುಡಿದರು.

ಶ್ರೀ ವಿನಯಕಿರಣ್ ಭಟ್‌ರವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಈ ಸಮಾರಂಭವನ್ನು ಶ್ರೀ ಯು. ಅರವಿಂದ ಕುಮಾರ್ ಪ್ರಾಸ್ತಾವಿಕ ಮಾತುಗಳನ್ನಾಡಿ ಕಾರ್ಯಕ್ರಮ ನಿರೂಪಿಸಿದರು. ಶ್ರೀಮತಿ ಮಾಲಿನಿ ವಿ.ರಾವ್ ಧನ್ಯವಾದವನ್ನಿತ್ತರು. ಶ್ರೀ ಪ್ರಭಾಕರರಾವ್ ವೇದಿಕೆಯಲ್ಲಿದ್ದವರಿಗೆ ಹೂ ನೀಡಿ ಗೌರವಿಸಿದರು. ವೇದಿಕೆಯಲ್ಲಿ ಅಲೆವೂರು ಶ್ರೀನಿವಾಸ್‌ರಾವ್, ಎ.ವಿಷ್ಣುಮೂರ್ತಿರಾವ್ ರವರು ಉಪಸ್ಥಿತರಿದ್ದರು.

## ಅಭಿನಂದನೆಗಳು



**ಶ್ರೀಮತಿ ನಳಿನಿ ಶ್ಯಾನುಭೋಗ್ ಹಾಗೂ ಶ್ರೀ ತಂತ್ರಾಡಿ ರಂಗರಾಯ ಶ್ಯಾನುಭೋಗ್**

ಮೇ 20ರಂದು ತಮ್ಮ ವೈವಾಹಿಕ ಜೀವನದ ಐವತ್ತು ಸಂವತ್ಸರಗಳನ್ನು ಪೂರೈಸಿದ ಸಂತೋಷವನ್ನು ಬೆಂಗಳೂರಿನಲ್ಲಿರುವ ಶ್ರೀ ತಂತ್ರಾಡಿ ರಂಗರಾಯ ಶ್ಯಾನುಭೋಗ್ ಹಾಗೂ ಶ್ರೀಮತಿ ನಳಿನಿ ಆರ್. ಶಾನುಭೋಗ್‌ರವರು ನಮ್ಮೊಂದಿಗೆ ಈ ತಿಂಗಳ ಶ್ರೀ ಶಾರದಾ ಪತ್ರಿಕೆಯ ಸಂಪೂರ್ಣ ಪ್ರಾಯೋಜಕತ್ವವನ್ನು ವಹಿಸಿಕೊಳ್ಳುವುದರ ಮೂಲಕ ಹಂಚಿಕೊಂಡಿದ್ದಾರೆ. ಶ್ರೀ ತಂತ್ರಾಡಿ ರಂಗರಾಯ ಶ್ಯಾನುಭೋಗ್ ದಂಪತಿಗಳು ಶ್ರೀ ಶಾರದಾ ಪತ್ರಿಕೆಯ ಮಹಾಪೋಷಕರು. ಅವರ ಪುತ್ರ ಅಶೋಕ್ ಹಾಗೂ ಸೊಸೆ ದೀಪಾಲಿ ಇವರೂ ಸಹಾ ಶ್ರೀ ಶಾರದಾ ಪತ್ರಿಕೆಯ ಮಹಾಪೋಷಕರಾಗಿದ್ದಾರೆ. ಶ್ರೀ ತಂತ್ರಾಡಿ ರಂಗರಾಯ ಶ್ಯಾನುಭೋಗ್ ಕುಟುಂಬಕ್ಕೆ ಶ್ರೀ ಶಾರದೆಯು ಸಕಲ ಸೌಭಾಗ್ಯಗಳನ್ನು ಕರುಣಿಸಿ ಕಾಪಾಡಲಿ ಎಂದು ನಾವು ಪ್ರಾರ್ಥಿಸುತ್ತೇವೆ. ಶ್ರೀ ಶಾರದಾ ಪತ್ರಿಕೆಗೆ ನೀಡಿದ ಸಹಾಯಕ್ಕಾಗಿ ಅವರಿಗೆ ಅನಂತ ಧನ್ಯವಾದಗಳು.

## ಸಂಪಾದಕೀಯ.....

– ಡಾ। ವೈ. ಸುದರ್ಶನ್ ರಾವ್

1963ನೇ ಇಸವಿಯಲ್ಲಿ ಪ್ರಕಟವಾದ “ತುಳುನಾಡು” ಪುಸ್ತಕ ಪ್ರೊಫೆಸರ್ ಡಾ. ಪಾದೂರು ಗುರುರಾಜ ಭಟ್ಟರ ಪ್ರಥಮ ಇತಿಹಾಸ ಸಂಶೋಧನಾ ಪುಸ್ತಕ. ಇದು ಸ್ಥಾನಿಕ ಬ್ರಾಹ್ಮಣರಿಗೆ ಸಾಮಾಜಿಕವಾಗಿ ಪುನರ್ಜನ್ಮವಿತ್ತ ಪುಸ್ತಕವೆಂದರೆ ಅತಿಶಯೋಕ್ತಿಯಾಗದು. ಪ್ರೊಫೆಸರ್ ಪಾದೂರು ಗುರುರಾಜ ಭಟ್ಟರು ಕರ್ನಾಟಕವು ಕಂಡ ಅತ್ಯುತ್ತಮ ಇತಿಹಾಸ ತಜ್ಞರು. ಅವರಂತಹ ಇತಿಹಾಸದ ದಾಖಲೆಗಳನ್ನು ಪೂರ್ವಾಗ್ರಹವಿಲ್ಲದೆ ಪರೀಕ್ಷಿಸಿ ಸತ್ಯವನ್ನು ಮಾತ್ರ ಒಪ್ಪುವ ಇತಿಹಾಸ ತಜ್ಞರು ವಿರಳ. ತುಳುನಾಡಿನ ಇತಿಹಾಸಕ್ಕೂ ಪಾದೂರು ಗುರುರಾಜ ಭಟ್ಟರಿಗೂ ಅನನ್ಯ ನಂಟು. ತುಳುನಾಡಿನ ಇತಿಹಾಸದ ಬಗ್ಗೆ ಅವರ ಉಲ್ಲೇಖವೇ ಕೊನೆಯ ಮಾತು. ತುಳುನಾಡ ಬಗ್ಗೆ ಅಧ್ಯಯನ ಮಾಡಿದ ಇನ್ನೋರ್ವ ಇತಿಹಾಸಕಾರರೆಂದರೆ ಡಾ.ಬಿ.ಎ. ಸಾಲೆತ್ತೂರು ಅವರು.

ಶ್ರೀ ಪಾದೂರು ಗುರುರಾಜ ಭಟ್ಟರು ಹುಟ್ಟಿದ್ದು 1924ನೇ ಇಸವಿಯಲ್ಲಿ, ಉಡುಪಿಯ ಬಳಿಯ ಪಾದೂರಿನಲ್ಲಿ, ಮಾಧ್ವ ಸಂಪ್ರದಾಯದ ತಂತ್ರಿಗಳ ಮನೆತನದಲ್ಲಿ. 1942ರಿಂದ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ. ವೃತ್ತಿಯಲ್ಲಿದ್ದಂತೆ ಮದ್ರಾಸ್ ಯೂನಿವರ್ಸಿಟಿಯಿಂದ ಬಿ.ಎ.ಪದವಿ, ಬನಾರಸ್ ಯೂನಿವರ್ಸಿಟಿಯಿಂದ ಎಂ.ಎ. ಪದವಿ ಹಾಗೂ ಮೈಸೂರು ಯೂನಿವರ್ಸಿಟಿಯಿಂದ ಪಿ.ಹೆಚ್.ಡಿ ಪದವಿ ಪಡೆದರು. “ತುಳುನಾಡಿನ ಇತಿಹಾಸದಲ್ಲಿ ಸ್ಥಾನಿಕರು” ಇದು ನಮ್ಮ ಸಮಾಜದ ಮೇಲೆ ಅವರು ಬರೆದ ಇನ್ನೊಂದು ಸಂಶೋಧನಾ ಪುಸ್ತಕ. ಇವರು 1978ರಲ್ಲಿ ತನ್ನ 54ನೇ ವರ್ಷ ಪ್ರಾಯದಲ್ಲಿ ನಿಧನ ಹೊಂದಿದರು.


ಪ್ರೊಫೆಸರ್ ಡಾ. ಪಾದೂರು ಗುರುರಾಜ ಭಟ್ಟರು

ಶ್ರೀ ಪಾದೂರು ಗುರುರಾಜ ಭಟ್ಟರು ಉಡುಪಿಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ಇತಿಹಾಸದ ಪ್ರಾಧ್ಯಾಪಕರಾಗಿದ್ದಾಗ ತುಳುನಾಡಿನ ಮೂಲೆಮೂಲೆಗಳನ್ನು ಸುತ್ತಿ ಈ ಪ್ರದೇಶದ ಇತಿಹಾಸದ ಬಗ್ಗೆ ವಿಶೇಷವಾದ ಅಧ್ಯಯನ ಹಾಗೂ ಸಂಶೋಧನೆ ಮಾಡಿದರು. ತುಳುನಾಡಿನ ಇತಿಹಾಸದ ಬಗ್ಗೆ ಆ ತನಕ ಲಭ್ಯವಿದ್ದ ಕೃತಿಗಳನ್ನೂ ಅಧ್ಯಯನ ಮಾಡಿದರು. ನಂತರ ಅವರು ಪ್ರಕಟಿಸಿದ ಈ ಪುಸ್ತಕದಲ್ಲಿ ಯಾವುದೇ ಬಾಹ್ಯಒತ್ತಡಗಳಿಗೆ ಮಣಿಯದೆ, ಇತಿಹಾಸದ ಕುರುಹುಗಳು ಹೇಳುವ ವಾಸ್ತವದ ಚಿತ್ರಣವನ್ನು ಅವರು ಯಥಾವತ್ ಮಂಡಿಸಿದ್ದಾರೆ. ಈ ಪುಸ್ತಕದಲ್ಲಿ ಅವರು ತುಳುನಾಡಿನಲ್ಲಿರುವ ವಿವಿಧ ಜಾತಿಗಳ ಮೂಲ, ಅವು ಬೆಳೆದು ಬಂದ ಬಗೆ ಹಾಗೂ ವೈಶಿಷ್ಟ್ಯತೆ ಬಗ್ಗೆ ವಿವರಿಸಿದ್ದಾರೆ.

ಈ ಪುಸ್ತಕದಲ್ಲಿ ಸ್ಥಾನಿಕ ಬ್ರಾಹ್ಮಣರ ಬಗ್ಗೆ ಮೂರು ಅಧ್ಯಾಯಗಳಲ್ಲಿ ಉಲ್ಲೇಖವಿದೆ. ಎರಡು ಅಧ್ಯಾಯಗಳನ್ನು ಸ್ಥಾನಿಕರಿಗೇ ಮೀಸಲಾಗಿಡಲಾಗಿದೆ. ಈ ಅಧ್ಯಾಯಗಳಲ್ಲಿ ಅವರು ಸ್ಥಾನಿಕ ಬ್ರಾಹ್ಮಣರು ತುಳುನಾಡಿನ ಮೂಲ ಬ್ರಾಹ್ಮಣರೆಂದು, ಒಂದು ಕಾಲದಲ್ಲಿ ಅತ್ಯಂತ ಉನ್ನತ ಸ್ಥಾನವನ್ನು ಅನುಭವಿಸಿದವರೆಂದು, ಮುಂದೆ ಕಾಲಕ್ರಮೇಣ ಇತರ ಬ್ರಾಹ್ಮಣರು ಪ್ರಬಲರಾದಂತೆ ಹಿನ್ನಡೆ ಹೊಂದಿದರು ಎಂದು ಸಾಧಾರ ಸಮೇತ ವಿವರಿಸಿದ್ದಾರೆ. ಅವರೇ ತಮ್ಮ ಮುನ್ನುಡಿಯಲ್ಲಿ ಹೇಳಿರುವಂತೆ ಸ್ಥಾನಿಕ ಬ್ರಾಹ್ಮಣ ಸಮುದಾಯದ ಬಗ್ಗೆ ಬಾಲ್ಯದಿಂದಲೇ ಸಂಪರ್ಕವಿದ್ದ ಅವರಿಗೆ ಉಳಿದ ಬ್ರಾಹ್ಮಣರು ಅವರನ್ನು ನಡೆಸಿಕೊಳ್ಳುತ್ತಿದ್ದ ರೀತಿಯಿಂದ ವಿಶೇಷ ಆಸಕ್ತಿಯಿತ್ತು. ಮುಂದೆ ದೊಡ್ಡವನಾಗಿ ಇತಿಹಾಸದ ಸಂಶೋಧನೆ ಮಾಡುತ್ತ ಹೋದಂತೆ ಸ್ಥಾನಿಕರ ನಿಜ ಚರಿತ್ರೆಯ ಅನುಭವ ಅವರಿಗಾಯಿತು. ನಮ್ಮ ನಾಡಿನ ಅತ್ಯಂತ ಪ್ರಧಾನವಾದ ಸಾಮಾಜಿಕ ಘಟಕಗಳಲ್ಲಿ ಒಂದಾದ ಬ್ರಾಹ್ಮಣರ ಮೂಲವನ್ನು ಈ ಸ್ಥಾನಿಕರಲ್ಲಿ ಕಂಡುಕೊಳ್ಳಬೇಕಾದುದು ನಮ್ಮ ಕರ್ತವ್ಯ ಎಂದು ಉಲ್ಲೇಖಿಸಿದ್ದಾರೆ. ಸ್ಥಾನಿಕರ ಸ್ಥಾನಮಾನದ ಬಗ್ಗೆ ಇದಕ್ಕೂ ಮುನ್ನ ಹಲವಾರು ಪುಸ್ತಕಗಳು ಬಂದಿದ್ದರೂ ಪ್ರಾಮಾಣಿಕ ಇತಿಹಾಸ ಸಂಶೋಧಕನಿಂದ ಹೊರಬಂದ ಈ ಲೇಖನ ಸ್ಥಾನಿಕರ ಹೋರಾಟಕ್ಕೆ ನೈತಿಕ ಬಲವನ್ನು ತಂದು ಕೊಟ್ಟದ್ದು ಮಾತ್ರವಲ್ಲ ಸ್ವತಃ ಸ್ಥಾನಿಕರಿಗೆ ಗೊತ್ತಿರದಿದ್ದ ತಮ್ಮ ಇತಿಹಾಸದ ಪರಿಚಯವನ್ನು ಮಾಡಿಕೊಟ್ಟಿತು.

ಶ್ರೀ ಪಾದೂರು ಗುರುರಾಜ ಭಟ್ಟರ ಈ ಪುಸ್ತಕವನ್ನು ಹಲವಾರು ಬಾರಿ ಓದಿದ್ದೇನೆ. ಸ್ಥಾನಿಕ ಬ್ರಾಹ್ಮಣ ಸಮಾಜವು ಅವರನ್ನು ಯಾವತ್ತೂ ಸ್ಮರಿಸುತ್ತಿರಬೇಕಾದಂತಹಾ ಉಪಕಾರವನ್ನು ಅವರು ನಮ್ಮ ಸಮಾಜಕ್ಕೆ ಮಾಡಿದ್ದಾರೆ. ಇದರಿಂದಾಗಿ ಅವರು ಹಲವಾರು ಕಷ್ಟನಷ್ಟಗಳನ್ನು ಹಾಗೂ ಪ್ರತಿರೋಧಗಳನ್ನು ಎದುರಿಸಿದ್ದಾರೆ. **ಈ ಮಹಾನ್ ಚೇತನವು ಅಸ್ತಂಗತವಾಗಿ ಇಂದಿಗೆ ನಲವತ್ತನೇ ವರ್ಷ. ಅವರ ಬಗ್ಗೆ ಈ ಕಿರುಲೇಖನವನ್ನು ಪ್ರಕಟಿಸುವ ಮೂಲಕ ನಾವು ನಮ್ಮ ನಮನಗಳನ್ನು ಸಲ್ಲಿಸುತ್ತಿದ್ದೇವೆ.**


**ಸಂಪಾದಕ ಮಂಡಳಿ**

ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ


ಸ್ಥಾನಿಕ ಬ್ರಾಹ್ಮಣರ ದೇವಸ್ಥಾನಗಳ ಪರಿಚಯ ಮಾಲೆ–33

## ಶ್ರೀ ಮಹಿಷಮರ್ದಿನಿ ದೇವಸ್ಥಾನ, ಅಜ್ಜಾವರ, ಸುಳ್ಯ





ದಿವಾನ ಲಕ್ಷ್ಮೀನಾರ್ಣಪ್ಪಯ್ಯ ನಮ್ಮ ಸಮಾಜದ ಅತ್ಯಂತ ಗೌರವದ ಹೆಸರು. ಇವರು ಕೊಡಗಿನ ಕೊನೆಯ ಅರಸರಾದ ಚಿಕ್ಕವೀರರಾಜೇಂದ್ರ ಅರಸರಿಗೆ (1820–1834) ದಿವಾನರಾಗಿದ್ದವರು. ಸುಳ್ಯದ ಅಜ್ಜಾವರದವರು. ಇವರು ಬ್ರಿಟಿಷರ ವಿರುದ್ಧ ಹೋರಾಡಿ ಶಿಕ್ಷೆಗೆ ಒಳಗಾದವರು. ಇವರ ಕುಟುಂಬದವರ ಆಡಳಿತದಲ್ಲಿರುವ ಅಜ್ಜಾವರದ ಗ್ರಾಮದೇವಸ್ಥಾನವೇ ಶ್ರೀ ಮಹಿಷಮರ್ದಿನಿ ದೇವಸ್ಥಾನ. ಅಷ್ಟಮಂಗಲ ಪ್ರಶ್ನೆ ಪ್ರಕಾರ ಈ ದೇವಸ್ಥಾನದ ಪೂಜೆಗಾಗಿಯೇ ವಲಸೆ ಬಂದ ಮನೆತನವಿದು.

ಸುಳ್ಯದಿಂದ ಮಡಿಕೇರಿಗೆ ಹೋಗುವಾಗ ಸುಳ್ಯಪೇಟೆಯ ಮಧ್ಯದಲ್ಲಿ ಬಲಕ್ಕೆ, ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಬದಿಯಲ್ಲಿ, ಅಜ್ಜಾವರಕ್ಕೆ ಹೋಗುವ ದಾರಿ ಸಿಗುತ್ತದೆ. ಪಯಸ್ವಿನಿ ನದೀತಟದ ವನಸಿರಿಯನ್ನು ಸೀಳಿ ಸಾಗುವ ಈ ಸಪೂರ ರಸ್ತೆ ಅಜ್ಜಾವರ ತಲುಪುತ್ತಿದ್ದಂತೆ ರಸ್ತೆಯ ಎಡಪಕ್ಕದಲ್ಲಿ ಈ ವಿಶಾಲವಾದ ದೇವಸ್ಥಾನ ಸಿಗುತ್ತದೆ. ಸುತ್ತ ಹಂಚಿನ ಮಾಡಿನ ಪೌಳಿ, ಮುರಕಲ್ಲಿನ ಗರ್ಭಗುಡಿ, ತೀರ್ಥಮಂಟಪಗಳಿಂದ ಸರಳವಾಗಿ ಕಂಡರೂ ಆಕರ್ಷಕವಾಗಿದೆ. ಮಹಿಷಮರ್ದಿನಿ ಇಲ್ಲಿ ಪ್ರಧಾನದೇವರು. ಮಹಿಷಾಸುರನನ್ನು ತ್ರಿಶೂಲದಿಂದ ಸಂಹರಿಸುತ್ತಿರುವ ಆಳೆತ್ತರದ ಚತುರ್ಭುಜ ಶಿಲಾಮೂರ್ತಿ. ಉಪದೇವರಾಗಿ ಶಾಸ್ತಾವು ದೇವರುಗಳ ಗುಡಿ ಇದೆ. ಅಜ್ಜಾವರ ಶಿವರಾಯರು ಪ್ರಸ್ತುತ ಈ ದೇವಳದ ಅನುವಂಶಿಕ ಆಡಳಿತ ಮೊಕ್ತೇಸರರಾಗಿದ್ದಾರೆ. ಅರ್ಚಕರು ಹಾಗೂ ತಂತ್ರಿಗಳಾಗಿ ಇತರರು ಸೇವೆ ಸಲ್ಲಿಸುತ್ತಿದ್ದಾರೆ.

ಇಲ್ಲಿ ದೇವರಿಗೆ ತ್ರಿಕಾಲಪೂಜೆ ಸಲ್ಲುತ್ತದೆ. ನವರಾತ್ರಿ ಹಬ್ಬ ವಿಜೃಂಭಣೆಯಿಂದ ನೆರವೇರುತ್ತದೆ. ವರ್ಷಾವಧಿ ಜಾತ್ರೆಗೆ ನೂರಾರು ಜನ ಸೇರುತ್ತಾರೆ. ದೇವಳದ ಪರಿಸರದಲ್ಲಿ ಶ್ರೀ ದುರ್ಗಾಪರಮೇಶ್ವರಿ ಭಜನಾಮಂಡಳಿ ಸಕ್ರಿಯವಾಗಿದೆ. 1995ರಲ್ಲಿ ಜೀರ್ಣೋದ್ಧಾರ ನಡೆಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಶ್ರೀ ಎ. ಶಿವರಾವ್ ಇವರನ್ನು 9448120309ನಲ್ಲಿ ಸಂಪರ್ಕಿಸಬಹುದು.


**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**
ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ
“ಗೃಹ ಸಾಲ”
ಸಂಘದ ಪ್ರಾಥಮಿಕ ಸದಸ್ಯರಿಗೆ 11.50%
(ಷರತ್ತುಗಳು ಅನ್ವಯ)

| | |
|---|---|
| ವಾಹನ ಸಾಲ | 12% |
| ಹಳೆಯ ವಾಹನ | 13.5% |
| ಆಭರಣ ಸಾಲ | 12% |
| ವೈಯಕ್ತಿಕ ಸಾಲ | 16% |
| ಶಿಕ್ಷಣ ಸಾಲ | 12% |
| ಅಡಮಾನ ಸಾಲ | 12.5% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | 5% | ನಿತ್ಯನಿಧಿ ಠೇವಣಿ | 5% |
| 46 ದಿನಗಳಿಂದ 364 ದಿನಗಳು | 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | 9.5% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2010–11 ರಿಂದ 2015–16ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)



*With Best Compliments from :*



**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**
Medicare Centre, Behind Pai Electronics, Court Back Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (11-30 a.m. to 2-00 p.m.)



*Power Cut !!!???*
*Install Best Quality Inverters...*

Mobile : 9483242111
K.Suresh Rao : 9036443884
Tel : 0820-2523436



**DEEPA ENTERPRISES**
Business Complex, Ground Floor,
Near Telephone Exchange, Hotel Udupi Residency Road,
Udupi-576101.

Inverters, UPS, Batteries, Repairs Maintenance & Charging




# ಬಿಂದು–ಹನಿಗವನ ಸಂಕಲನ

- ವೈ. ಮೋಹನ ರಾವ್

'ಬಿಂದು'–ಈ ಹನಿಗವನ ಸಂಕಲನವನ್ನು ಬರೆದವರು ಶ್ರೀಕೃಷ್ಣಯ್ಯ ಅನಂತಪುರ. ಇವರು ನನ್ನ ಆತ್ಮೀಯ ಮಿತ್ರರಾದ ಎ. ಈಶ್ವರಯ್ಯನವರ ಸಹೋದರ. ಇವರು "ಆತ್ಮೀಯ ಮೋಹನ್ ರಾವ್ ಅವರಿಗೆ ಪ್ರೀತಿಯಿಂದ" ಒಂದು ಹನಿಗವನ ಸಂಕಲನವನ್ನು ನೀಡಿದ್ದರು. ಈ ಕೃತಿ 2005ರಲ್ಲಿ ಪ್ರಕಟವಾಗಿತ್ತು. ಕಾರಣಾಂತರದಿಂದ ಈ ಕೃತಿಯ ಪರಿಚಯವನ್ನು ನೀಡಲಾಗಲಿಲ್ಲ.

"ಇದು ನನ್ನ ಮೊದಲನೇ ಹನಿಗವನ ಸಂಕಲನ. ಇಲ್ಲಿಯ ಹೆಚ್ಚಿನ ಹನಿಗವನಗಳು ಈಗಾಗಲೇ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಬರವಣಿಗೆಯ ಆರಂಭದ ಸುಮಾರು ಹದಿನೈದು ವರ್ಷಗಳ ಕಾಲ ನಾನು ಹನಿಗವನಗಳನ್ನು ಬರೆದಿರಲಿಲ್ಲ. ಅನಂತರ ಅನೇಕ ಮಿತ್ರರ ಒತ್ತಾಯ, ಪ್ರೋತ್ಸಾಹ ನನ್ನನ್ನು ಹನಿಗವನಗಳನ್ನು ಬರೆಯುವಂತೆ ಪ್ರೇರೇಪಿಸಿತು. ನಾನು ಬರೆದದ್ದೆಲ್ಲ ಕಾಳು ಎಂಬ ಭ್ರಮೆ ನನಗಿಲ್ಲ, ಬೆಳೆ ಅಂದ ಮೇಲೆ ಜಳ್ಳು ಇರಲೇಬೇಕು ತಾನೇ? ಜಾಡಿಸಿ ಕಾಳುಗಳನ್ನು ಆರಿಸಿಕೊಳ್ಳುವಿರಿ ಎಂದು ನಂಬಿದ್ದೇನೆ" ಎಂದು ಶ್ರೀಕೃಷ್ಣಯ್ಯ ಅನಂತಪುರ ಕೃತಿಯ ಬಗ್ಗೆ 'ನನ್ನ ಎರಡು ಹನಿ'ಯಲ್ಲಿ ಪ್ರಸ್ತಾವಿಸಿದ್ದಾರೆ.

"ಖ್ಯಾತ ಕವಿ ಶ್ರೀ ಬಿ.ಆರ್.ಲಕ್ಷ್ಮಣ್ ರಾವ್ 'ಬಿಂದು'ವಿಗೆ ಅಂದವಾದ ತೋರಣ ಅಂದರೆ ಮುನ್ನುಡಿಯ ಮಾತುಗಳನ್ನು ಬರೆದಿದ್ದಾರೆ. 'ಬಿಂದು' ಸಂಕಲನದ ಎದ್ದು ತೋರುವ ವೈಶಿಷ್ಟ್ಯವೆಂದರೆ ಇದರ ವಸ್ತು ವೈವಿಧ್ಯ. ಇಲ್ಲಿ ಪ್ರೀತಿ ಪ್ರೇಮ, ಸರಸ ವಿರಸಗಳನ್ನು ಜೊತೆಗೆ ಕೌಟುಂಬಿಕ, ಸಾಮಾಜಿಕ ಹಾಗೂ ಸಮಕಾಲೀನ ರಾಜಕೀಯ ವಿದ್ಯಮಾನಗಳ ಬಗೆಗೆ ಕವಿಯ ಪ್ರತಿಕ್ರಿಯೆಗಳು ಸಶಕ್ತವಾಗಿ ದಾಖಲಾಗಿವೆ. ಕವಿಯ ನೋಟದಲ್ಲಿ ಹಾಗೂ ಅಭಿವ್ಯಕ್ತಿಯಲ್ಲಿ ಹೊಸತನವಿದೆ, ಕಲಾತ್ಮಕತೆಯಿದೆ. ನೆನಪಿನಲ್ಲಿ ಉಳಿಯುವ ಹಾಗೂ ಬೆಲೆಯುಳ್ಳ ಹಲವಾರು ಹನಿಗವನಗಳು ಇಲ್ಲಿವೆ. ಸಹಜವಾದ ಹಾಗೂ ಧ್ವನಿ ರಮ್ಯವಾದ ಭಾಷೆ, ಲವಲವಿಕೆಯ ಶೈಲಿ ಮತ್ತು ಅನೀರೀಕ್ಷಿತ ಪ್ರಾಸ ಈ ಕವಿಗೆ ಒಲಿದಿದೆ."

"ನನ್ನ ಮಟ್ಟಿಗೆ ಸಂಕಲನದ ಅತ್ಯಂತ ಸ್ಮರಣೀಯ ಹನಿಗವನವೆಂದರೆ ಇದು.


ಕೋಲು
ಕೋಲು
ಕುಂಟನಿಗೆ
ಕಾಲು,
ಕುರುಡನಿಗೆ
ಕಣ್ಣು,

ಹಾಗೆಯೇ, ಹನಿಗವನಕ್ಕೆ ಭಾಷ್ಯ ಬರೆದಂತಿದೆ ಈ ರಚನೆ.

ಕಾವ್ಯ ಬಿಂದು
ಅಳುತ್ತಿರುವ
ಮುದ್ದು ಕಂದನ
ಕಣ್ಣಂಚಿನಲಿ
ಮಿಂಚುತ್ತ
ಕಂಪಿಸುತ್ತಿದೆಯೊಂದು
ಕಾವ್ಯ ಬಿಂದು.

'ಬಿಂದು'ವಿನಲ್ಲಿ 154 ಹನಿಗವನಗಳಿವೆ. ಪ್ರತಿಯೊಂದು ಹನಿಗವನ ತನ್ನದೇ ಆದ ಶೈಲಿಯಲ್ಲಿ ಅರ್ಥಪೂರ್ಣ ಹಾಗೂ ಸಾರ್ಥಕ ಹನಿಗವನವಾಗಿದೆ. ಮೆಲುಕು ಹಾಕಬಲ್ಲ ಕೆಲವು ಹನಿಗವನಗಳು;

ಬಿದಿರು
ಒಣಗಿಸಿ ಒಲೆಲಿಟ್ಟರೆ
ಉರುವಲು
ಕೊರೆದು
ತುಟಿಗಿಟ್ಟರೆ
ಕೊಳಲು.




ಹುಡುಕಾಟ
ಯಾಕಯ್ಯ ಜಪತಪ
ಪೂಜೆ ನೈವೇದ್ಯ, ಹವನ
ಮಂತ್ರ, ತಂತ್ರ, ಧೂಪ
ದೀಪ, ತಾಪ, ಪರ್ಯಟನ
ಇರುವಾಗ ನಂಬಿಕೆ
ಬುಡದಲ್ಲೇ ನಾರಾಯಣ.

ಕಂಪ್ಯೂಟರ್ ಬದುಕು
ಬೌದ್ಧಿಕ ಸಂಪತ್ತನ್ನೆಲ್ಲ
ಕಂಪ್ಯೂಟರ್‌ಗಳಿಗೆ ತುಂಬಿ
ಅದನ್ನೇ ನಂಬಿ
ಬದುಕುವವರಿಗೆ
ಏನೂ ಉಳಿದಿಲ್ಲ
ತಲೆಯೊಳಗೆ
"ಊಟ ಆಗಿದೆಯಾ"
ಎಂದು ಕೇಳಿದರೂ
ಉತ್ತರಕ್ಕೆ ಓಡುತ್ತಾರೆ
ಕಂಪ್ಯೂಟರ್ ಒಳಗೆ'

ನಾಯಕ
ಈತ ಜಾತ್ಯತೀತ
ಜನನಾಯಕ
ದೇಶಕೊಳ್ಳೆ ಹೊಡೆಯುವುದೇ
ಪ್ರಧಾನ ಕಾಯಕ.

ಯೋಗ್ಯತೆ
ಒಂದೇ ಒಂದು ಕವಿತೆ
ಬರೆಯದೇ ಇದ್ದ ವನಿತೆ
ಅಲಂಕರಿಸಿದ್ದರು
ಕವಿಗೋಷ್ಠಿ ಅಧ್ಯಕ್ಷತೆ

ಅಗಲಿಕೆ
ವೀಣೆ
ಝೇಂಕರಿಸುತ್ತಿದ್ದಂತೆ
ತಂತಿ
ಠಣ್ಣನೆ ಕಡಿದಂತೆ
ನಿನ್ನಗಲಿಕೆಯೊಂದು
ರಸಾಭಾಸ

ಆಯುಷ್ಯ
ಚಂಡೆ, ಮದ್ದಳೆ, ಚಕ್ರತಾಳ
ಗರ್ನಾಲು, ದೀವಟಿಗೆ, ತಾಳ,
ನಡುಗುವಂತೆ ಗುಂಡಿಗೆ
ಆರ್ಭಟಗಳೊಂದಿಗೆ
ರಂಗ ತುಂಬಾ ಕುಣಿದು, ಮೆರೆದು
ಭೀತಿ ತರಂಗಗಳೆಬ್ಬಿಸುವ
ಬಣ್ಣದ ವೇಷಗಳಿಗೆ
ಅಯುಷ್ಯ ಮೂರೇಗಳಿಗೆ,

ಚುಟುಕು ಕವಿ
ಚುಟುಕು ಕವಿ
ಎನ್ನದಿರು ಮರಿ
ಕವಿಯೆನ್ನುವುದೇ ಸರಿ
ಕಾವ್ಯ ಚುಟುಕಾದರೂ
ಕವಿ ಚುಟುಕಾಗಲಾರ ಅರಿ.

ಕಾಸರಗೋಡು ಎಂದಾಗ ನೆನಪಾಗುವವರು ಎಂ.ವ್ಯಾಸ ಮತ್ತು ಅವರ ವ್ಯಾಸ ಸಾಹಿತ್ಯ. ಇವರ ಸಂಬಂಧಿಕರಾದ ಶ್ರೀ ಕೃಷ್ಣಯ್ಯ, ಅನಂತಪುರ ಕನ್ನಡ ಕವಿಗಳು. ಇವರು 'ಜೀವ ತಂತಿಯಮೀಟಿ', 'ಮಗಳು ಮತ್ತು ಮಲ್ಲಿಗೆ ಬಳ್ಳಿ', 'ಬಿಂದು' ಹಾಗೂ ಇನ್ನಿತರ ಸಾಹಿತ್ಯ ಕೃತಿಗಳನ್ನು ಹೊರತಂದಿದ್ದಾರೆ. ಇವರಿಗೆ ಅಭಿನಂದನೆಗಳು.

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಸಾಹಿತ್ಯೋತ್ಸವ ಕ್ರೀಡೋತ್ಸವ

■...1ನೇ ಪುಟದಿಂದ

ಶ್ರೀ ಎಂ.ಆರ್.ವಾಸುದೇವ ಇವರು ಆಶಯ ಭಾಷಣ ಮಾಡಿದರು. ಪ್ರೊ. ವರದರಾಜ ಚಂದ್ರಗಿರಿ ಇವರು ಉದ್ಘಾಟನಾ ಭಾಷಣ ಮಾಡಿದರು. ಶ್ರೀ ಗುರುರಾಜ ಮಾರ್ಪಳ್ಳಿಯವರ ಪುಸ್ತಕ ಬಿಡುಗಡೆ ನೆರವೇರಿತು. ಶ್ರೀ ಎ.ಪಿ. ಕೃಷ್ಣೆ ರವರು ಪುಸ್ತಕ ಪ್ರದರ್ಶನದ ಉದ್ಘಾಟನೆಯನ್ನು ಮಾಡಿದರು. ಶ್ರೀಮತಿ ಸ್ವಾತಿ ಪ್ರಮೋದ್ ಕುಮಾರ್ ಧನ್ಯವಾದವಿತ್ತರು.

ಉದ್ಘಾಟನಾ ಸಮಾರಂಭದ ನಂತರ ಡಾ. ವೀಣಾ ಫಾಲಚಂದ್ರರವರ ಅಧ್ಯಕ್ಷತೆಯಲ್ಲಿ ಕಲೆ ಸಾಹಿತ್ಯ ಮತ್ತು ಹದಿಹರೆಯ ಎಂಬ ವಿಷಯದ ಬಗ್ಗೆ ಡಾ.ಸುಲೇಖಾ ವರದರಾಜ ಇವರಿಂದ ವಿಚಾರ ಗೋಷ್ಠಿ ಹಾಗೂ ಸ್ವರಚಿತ ಕಾದಂಬರಿಗಳ ಬಗ್ಗೆ ಶ್ರೀಮತಿ ಕಾತ್ಯಾಯಿನಿ ಕುಂಜಿಬೆಟ್ಟು ಇವರಿಂದ ವಿಚಾರ ಗೋಷ್ಠಿ ನೆರವೇರಿತು. ನಂತರ ಶ್ರೀ ಗುರುರಾಜ ಮಾರ್ಪಳ್ಳಿಯವರ ತಂಡದಿಂದ ಕನ್ನಡ ಭಾವಗೀತೆಗಳ ಗಾಯನ ಕಾರ್ಯಕ್ರಮ ನೆರವೇರಿತು. ಅಪರಾಹ್ನದ ಭೋಜನದ ನಂತರ ಪ್ರೊ.ಕೃಷ್ಣಮೂರ್ತಿರವರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಹಾಗೂ ಜ್ಯೋತಿಷ್ಯದ ಬಗ್ಗೆ ಶ್ರೀ ಸುಕುಮಾರ ಆಲಂಪಾಡಿಯವರಿಂದ, ಸಾಹಿತ್ಯ ಹಾಗೂ ಕುಟುಂಬ ಜೀವನದ ಬಗ್ಗೆ ಶ್ರೀಮತಿ ಪರಮೇಶ್ವರಿ ಧಾರೇಶ್ವರ ಇವರಿಂದ, ಸಾಹಿತ್ಯ ಮತ್ತು ಆರೋಗ್ಯದ ಬಗ್ಗೆ ಡಾ. ವೈ ಸುದರ್ಶನರಾವ್ ಇವರಿಂದ, ಎಂ.ವ್ಯಾಸ ಅವರ ಕಥಾಸಾಹಿತ್ಯದ ಬಗ್ಗೆ ಶ್ರೀಮತಿ ಪ್ರಜ್ಞಾ ಮಾರ್ಪಳ್ಳಿಯವರಿಂದ ವಿಚಾರಗೋಷ್ಠಿಗಳು ಜರಗಿದವು. ನಂತರ ಶ್ರೀಮತಿ ಸಾವಿತ್ರಿ ಮನೋಹರ ರವರ ಅಧ್ಯಕ್ಷತೆಯಲ್ಲಿ ಶ್ರೀಮತಿ ಜಯಶ್ರೀ, ಶ್ರಿಮತಿ ಪಲ್ಲವಿ, ಶ್ರೀ ಬಿ. ವಿ.ರಾವ್. ಶ್ರೀ ಅಪಯಶ, ಶ್ರೀಮತಿ ಮಂಜುಳಾ ಮುರಳಿಧರ, ಶ್ರೀಮತಿ ಜಯಂತಿ ವಿನೋದ ರಾವ್, ಶ್ರೀ ಮ.ನಾ ಹೆಬ್ಬಾರ್, ಶ್ರೀಮತಿ ಸ್ವಾತಿ ಪ್ರಮೋದ್, ಶ್ರೀಮತಿ ಸ್ನೇಹಲತಾ ದಿವಾಕರ್, ಶ್ರೀಮತಿ ಸುಕನ್ಯ, ಶ್ರೀಮತಿ ವತ್ಸಲಾ ಯೋಗೀಶ, ಶ್ರೀಮತಿ ಜ್ಞಾನೇಶ್ವರಿ ಜೋಷಿ ಹಾಗೂ ಶ್ರೀ ಎಂ.ಆರ್.ವಾಸುದೇವರಿಂದ ಸ್ವರಚಿತ ಕವನಗಳ ವಾಚನ ಗಾಯನ ನಡೆಯಿತು.

ನಂತರ ಶ್ರೀ ಎಮ್.ಆರ್.ವಾಸುದೇವ ಹಾಗೂ ಶ್ರೀ ಮನೋಹರ ಪ್ರಸಾದ್‌ರವರ ಉಪಸ್ಥಿತಿಯಲ್ಲಿ ಶ್ರೀ ಗುರುರಾಜ ಮಾರ್ಪಳ್ಳಿ, ಶ್ರೀ ಮ.ನಾ.ಹೆಬ್ಬಾರ್, ಶ್ರೀಮತಿ ಸವಿತಾ ಶ್ರೀನಿವಾಸರಾವ್, ಶ್ರೀ ಬಿ.ವಿ.ರಾವ್ ಶ್ರೀ ಅಪಯಶ, ಶ್ರೀಮತಿ ಸಾವಿತ್ರಿ ಮನೋಹರ್, ಶ್ರೀ ಬೈಲೂರು ಬಾಲಚಂದ್ರರಾವ್, ಶ್ರೀಮತಿ ಪರಮೇಶ್ವರಿ ಧಾರೇಶ್ವರ ಇವರಿಗೆ ಸನ್ಮಾನ ಕಾರ್ಯಕ್ರಮ ನೆರವೇರಿತು. ನಂತರ ಶ್ರೀ ಅನಂತಪುರ ಕೃಷ್ಣಯ್ಯರವರ ಅಧ್ಯಕ್ಷತೆಯಲ್ಲಿ ಶ್ರೀ ಶ್ರೀರಾಂ ಎಲ್ಲಂಗಳ ಅವರು ಹಾಸ್ಯಸಂಭ್ರಮ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಶ್ರೀ ಎ. ಈಶ್ವರಯ್ಯ ಅಧ್ಯಕ್ಷರಾಗಿದ್ದರು. ಶ್ರೀ ಮನೋಹರ ಪ್ರಸಾದ್, ಶ್ರೀ ಬಿ. ಚಂದ್ರಶೇಖರ ರಾವ್, ಡಾ.ಬಿ.ಹೆಚ್. ಶ್ರೀಪತಿ ರಾವ್ ಅತಿಥಿಗಳಾಗಿದ್ದರು. ಶ್ರೀಮತಿ ಅರುಣಾ ಸೋಮಶೇಖರ ರಾವ್ ವಂದನಾರ್ಪಣೆ ಮಾಡಿದರು. ಶ್ರೀ ಸಂಜಯ ಕುಮಾರ್, ಶ್ರೀ ಶ್ರೀಕಾಂತ ರಾವ್, ಶ್ರೀ ನಾಗರಾಜ ರಾವ್ ವಕ್ವಾಡಿ ಕಾರ್ಯಕ್ರಮ ನಿರೂಪಿಸಿದರು.

ತಾ.27–05–2018ರ ಭಾನುವಾರ ಕ್ರೀಡೋತ್ಸವ ನೆರವೇರಿತು. ಶ್ರೀ ಹರ್ಷಕುಮಾರ್ ಕೇದಗೆ ಉದ್ಘಾಟಕರಾಗಿ ಆಗಮಿಸಿದ್ದರು. ಮುಖ್ಯಅತಿಥಿಗಳಾಗಿ ಶ್ರೀ ರವೀಂದ್ರನಾಥ ಬೆಳ್ಳೆ, ಇನ್ನಾ ಚಂದ್ರಕಾಂತ ರಾವ್, ಬಿ.ಕೆ. ಧನಂಜಯಕುಮಾರ್ ಆಗಮಿಸಿದ್ದರು. ಶಟಲ್ ಬ್ಯಾಡ್ಮಿಂಟನ್, ಟೇಬಲ್ ಟೆನ್ನಿಸ್, ಹಗ್ಗಜಗ್ಗಾಟ, ವಾಲಿಬಾಲ್, ತ್ರೋಬಾಲ್, ಎಂಡ್ಯುರೆನ್ಸ್ ರೇಸ್ ಪಂದ್ಯಾಟಗಳು ಜರಗಿದವು. ಸಮಾರೋಪ ಸಮಾರಂಭದಲ್ಲಿ ಶ್ರೀಮತಿ ಕವಿತಾ ಶಾಸ್ತ್ರಿ, ಶ್ರೀ ಸೋಮಶೇಖರ ರಾವ್, ಡಾ.ಎ.ಪಿ.ಕೃಷ್ಣೆ, ಶ್ರೀ ಎನ್.ಕೆ.ಜಗನ್ನಿವಾಸರಾವ್, ಡಾ.ಬಿ.ಹೆಚ್. ಶ್ರೀಪತಿ ರಾವ್ ಉಪಸ್ಥಿತರಿದ್ದರು. ಶ್ರೀಮತಿ ಭಾರತಿ ಸಂಜಯಕುಮಾರ್, ಶ್ರೀ ಅನಿಲ್ ಎನ್., ಶ್ರೀಮತಿ ಸ್ಮಿತಾ ನಂದಕಿಶೋರ್, ಶ್ರೀಮತಿ ಕವಿತಾ ಪ್ರದೀಪ್, ಶ್ರೀ ಮನೀಷ ರಾವ್, ಶ್ರೀ ಪಿ.ಉದಯ್ ಕುಮಾರ್ ಕಾರ್ಯಕ್ರಮವನ್ನು ಸಂಘಟಿಸಿದ್ದರು.



## ಮಿಥುನ ಮಾಸದ ವಿಶೇಷ ದಿನಗಳು

| | | | |
|---|---|---|---|
| 14–06–2018 | ಗ್ರೀಷ್ಮ ಋತು ನಿಜ ಜೇಷ್ಠಾ ಮಾಸ ಶುಕ್ಲಪಕ್ಷಾರಂಭ | 01–07–2018 | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 9.29 |
| 15–06–2018 | ಮಿಥುನ ಸಂಕ್ರಮಣ | 09–07–2018 | ಸರ್ವೈಕಾದಶಿ |
| 23–06–2018 | ಸರ್ವೈಕಾದಶಿ | 13–07–2018 | ಅಮಾವಾಸ್ಯೆ |
| 28–06–2018 | ಹುಣ್ಣಿಮೆ | 14–07–2018 | ಗ್ರೀಷ್ಮ ಋತು ಆಷಾಢ ಮಾಸ ಶುಕ್ಲಪಕ್ಷಾರಂಭ |
| 29–06–2018 | ಗ್ರೀಷ್ಮ ಋತು ನಿಜ ಜೇಷ್ಠಾ ಮಾಸ ಕೃಷ್ಣಪಕ್ಷಾರಂಭ | 16–07–2018 | ಕರ್ಕಾಟಕ ಸಂಕ್ರಮಣ ದಕ್ಷಿಣಾಯನ ಆರಂಭ |

With Best Compliments From :
Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

# ಧಾರ್ಮಿಕ ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ಶೃಂಗೇರಿ ಶ್ರೀ ಶಾರದಾಪೀಠದ ಕೊಡುಗೆ

**– ಡಾ|ಎಚ್.ವಿ.ನರಸಿಂಹಮೂರ್ತಿ, ಕುಂದಾಪುರ**

(ಹಿಂದಿನ ಸಂಚಿಕೆಯಿಂದ ಮುಂದುವರಿದುದು...)

ಜಗದ್ಗುರು ಆದಿಶಂಕರ ಜನ್ಮಸ್ಥಾನವಾದ ಕಾಲಟಿಯಲ್ಲಿ ಶ್ರೀಶಾರದಾಪೀಠವು ಅನೇಕ ಶಾಲೆ–ಕಾಲೇಜುಗಳನ್ನು ಸ್ಥಾಪಿಸಿದೆ. ಶಂಕರಕಾಲೇಜು ಸಮಿತಿಯಿಂದ ನಡೆಸಲ್ಪಡುವ ಶ್ರೀಶಂಕರ ಕಾಲೇಜು ವಿದ್ಯಾರ್ಥಿಗಳಿಗೆ ವಿಜ್ಞಾನ, ಕಲೆ ಮತ್ತು ವಾಣಿಜ್ಯ ಶಾಸ್ತ್ರಗಳಲ್ಲಿ ಉನ್ನತ ಶಿಕ್ಷಣವನ್ನು ನೀಡುತ್ತಿದೆ. ವಿದ್ಯಾರ್ಥಿಗಳಿಗೆ ಜೀವನಮೌಲ್ಯ ಶಿಕ್ಷಣ ನೀಡಿ. ಅವರ ವ್ಯಕ್ತಿತ್ವವನ್ನು ವಿಕಸನಗೊಳಿಸಲು ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಜಗದ್ಗುರು ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಸಂರಕ್ಷಣೆಯಲ್ಲಿ ಸ್ಥಾಪಿತಗೊಂಡ ಆದಿಶಂಕರ ಟ್ರಸ್ಟ್‌ನವರು ಶ್ರೀಶಾರದಾ ವಿದ್ಯಾಲಯ, ಆದಿಶಂಕರ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮತ್ತು ಆದಿಶಂಕರ ಟ್ರೈನಿಂಗ್ ಕಾಲೇಜ್–ಇವುಗಳನ್ನು ಸ್ಥಾಪಿಸಿರುವರು. ಈ ಶಿಕ್ಷಣಸಂಕೀರ್ಣದಲ್ಲಿ ಆರು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿರುವರು. ಆದಿಶಂಕರ ಟ್ರಸ್ಟ್‌ನವರು ಕಾಲಟಿಯನ್ನು ಒಂದು ಆದರ್ಶ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಕೇಂದ್ರವನ್ನಾಗಿ ರೂಪಿಸಲು ವಿಶೇಷವಾದ ಪ್ರಯತ್ನಗಳನ್ನು ಮಾಡುತ್ತಿದ್ದಾರೆ.

ಕಾಲಟಿಯ ಸಮೀಪದ ಶೋರನೂರು ಎಂಬಲ್ಲಿ ಸ್ಥಾಪಿಸಲಾದ ಪಿ.ಎಸ್.ಎನ್.ಎಂ ಆಯುರ್ವೇದ ಮೆಡಿಕಲ್ ಕಾಲೇಜು ದೇಶದ ಅತ್ಯುತ್ತಮ ಆಯುರ್ವೇದ ಕಾಲೇಜಾಗಿ ಮೂಡಿಬರುತ್ತಿದೆ. ಆಯುರ್ವೇದದಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನಕ್ಕೆ ಅವಕಾಶವಿರುವ ಈ ಕಾಲೇಜಿನಲ್ಲಿ ಶಲ್ಯತಂತ್ರ ಪಂಚಕರ್ಮ, ವಾಸ್ತು ಜ್ಯೋತಿಷ ಮೊದಲಾದ ಪ್ರಾಚೀನ ವಿಜ್ಞಾನಗಳನ್ನು ಬೋಧಿಸಲಾಗುತ್ತಿದೆ. ಕಾಲಟಿಯ ಸಮೀಪದಲ್ಲಿರುವ ಮಲಯತ್ತೂರ್ ಎಂಬಲ್ಲಿ ನಡೆಸಲಾಗುತ್ತಿರುವ 'ಶೃಂಗೇರಿ ಆಯುರ್ವೇದ ಧಾಮ' ಈಗಾಗಲೇ ಸಾಕಷ್ಟು ಚಿಕಿತ್ಸಾ ಸೌಲಭ್ಯಗಳನ್ನು ಹೊಂದಿ, ಜನಪ್ರಿಯವಾಗಿದೆ.

ಇತ್ತೀಚಿನ ದಿನಗಳಲ್ಲಿ ಆಡಳಿತ ನಿರ್ವಹಣಾಶಾಸ್ತ್ರಕ್ಕೆ ಇರುವ ಮಹತ್ತ್ವವನ್ನು ಮನಗಂಡು ಶ್ರೀಮಠವು 1996ರಲ್ಲಿ ದೆಹಲಿಯಲ್ಲಿ 'ಶ್ರೀಶಾರದಾ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯನ್ ಮ್ಯಾನೇಜ್‌ಮೆಂಟ್' ಎಂಬ ಕಾಲೇಜನ್ನು ಸ್ಥಾಪಿಸಿದೆ. ಈ ಕಾಲೇಜು ಆಡಳಿತ ನಿರ್ವಹಣೆಗೆ ಸಂಬಂಧಿಸಿದ ಅನೇಕ ವಿಷಯಗಳ ಕುರಿತು ಎರಡು ವರ್ಷದ ಸ್ನಾತಕೋತ್ತರ ಡಿಪ್ಲೋಮಾ ಮೊದಲಾದ ಶಿಕ್ಷಣವನ್ನು ನೀಡುತ್ತಿದೆ. ಇಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳಿಗೆ ದೇಶ–ವಿದೇಶಗಳ ಪ್ರಸಿದ್ಧ ಸಂಸ್ಥೆಗಳಲ್ಲಿ ಉದ್ಯೋಗಾವಕಾಶ ಲಭಿಸುತ್ತಿರುವುದು ಈ ಸಂಸ್ಥೆಗೆ ದೊರೆಯುತ್ತಿರುವ ರಾಷ್ಟ್ರೀಯ ಮನ್ನಣೆಯ ದ್ಯೋತಕವಾಗಿದೆ. ದೆಹಲಿಯ ಸಮೀಪದ ನೊಯಿಡ ಎಂಬಲ್ಲಿ ಶ್ರೀ ಶಾರದಾಪೀಠವು ಮಾನಸಿಕ ಅಸ್ವಸ್ಥ ಮಕ್ಕಳಿಗಾಗಿ ಒಂದು ಶಾಲೆಯನ್ನು ಸ್ಥಾಪಿಸಿದೆ. ಇದರಲ್ಲಿ ವಾಕ್ ಶ್ರವಣ ಚಿಕಿತ್ಸೆಯ ಜೊತೆಗೆ ಉದ್ಯೋಗ ಮತ್ತು ಉತ್ತಮ ಹವ್ಯಾಸಗಳ ತರಬೇತಿಯನ್ನು ನೀಡಲಾಗುತ್ತಿದೆ. ತಿರುಪ್ಪೂರಿನಲ್ಲಿ 'ಶ್ರೀ ಭಾರತೀತೀರ್ಥ ಸ್ಕೂಲ್ ಫಾರ್ ಸ್ಪೆಶಲ್ ಚಿಲ್ಡ್ರನ್' ಎಂಬ ಇಂತಹದೇ ಮತ್ತೊಂದು ಶಾಲೆ ನಡೆಯುತ್ತಿದೆ.

ಶೃಂಗೇರಿಯಲ್ಲಿನ 'ಶಾರದಾ ನರ್ಸಿಂಗ್ ಇನ್‌ಸ್ಟಿಟ್ಯೂಟ್' ಒಂದು ಉತ್ತಮ ಶಿಕ್ಷಣ ಸಂಸ್ಥೆಯಾಗಿ, ಅನೇಕ ಮಂದಿ ಶುಶ್ರೂಷಕಿಯರನ್ನು ತರಬೇತುಗೊಳಿಸುತ್ತಿದೆ. ಅವರ ಸೇವೆಯು ಕೇವಲ ಈ ಆಸ್ಪತ್ರೆಗೆ ಮಾತ್ರ ಸೀಮಿತವಾಗದೆ. ಸುತ್ತಮುತ್ತಲಿನ ಇತರ ಆಸ್ಪತ್ರೆಗಳಿಗೂ ಲಭ್ಯವಾಗುತ್ತಿದೆ. ಶೃಂಗೇರಿಯಲ್ಲಿ ತರಬೇತು ಪಡೆದ ದಾದಿಯರಿಗೆ ವಿದೇಶಗಳಲ್ಲೂ ಉದ್ಯೋಗಾವಕಾಶಗಳು ದೊರೆಯುತ್ತಿವೆ.

ಈ ಪ್ರಸಿದ್ಧ ಶಿಕ್ಷಣ ಸಂಸ್ಥೆಗಳಲ್ಲದೆ ಬೆಂಗಳೂರಿನ ಉಮನ್ಸ್ ಪೀಸ್ ಲೀಗ್ ಶಾಲೆ, ಅಶೋಕ ಶಾಲೆ, ದೀಪಿಕಾ ಶಾಲೆ, ಕೈದಿಗಳ ಮಕ್ಕಳಿಗೆ ಉಚಿತ ಶಿಕ್ಷಣ ನೀಡುವ 'ಸೋಕೇರ್' ಎಂಬ ಮತ್ತೊಂದು ಶಾಲೆ, ಶಿಶು ವಿಹಾರ, ಸಿಐಐಆರ್‌ಸಿ, ಶಂಕರ ರೋಟರಿ ಮಕ್ಕಳ ಗ್ರಂಥಾಲಯ, ಚೆನ್ನೈನಲ್ಲಿ ಶ್ರೀಭಾರತೀ ವಿದ್ಯಾಲಯ, ತಿರುನಲ್ವೇಲಿಯಲ್ಲಿ ಶ್ರೀ ಶೃಂಗೇರಿ ಶಾರದಾ ವಿದ್ಯಾಲಯ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪದ ಪೋರ್ಟ್‌ಬ್ಲೇರ್ ಎಂಬಲ್ಲಿನ ಆಯುರ್ವೇದ ಕಾಲೇಜು– ಹೀಗೆ ಶ್ರೀಮಠವು ಅನೇಕ ಶೈಕ್ಷಣಿಕ ಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ಶೃಂಗೇರಿಯ ಆಸುಪಾಸಿನ ಅನೇಕ ಶೈಕ್ಷಣಿಕ ಸಂಸ್ಥೆಗಳಿಗೆ ಆರ್ಥಿಕ ನೆರವು ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸುತ್ತಿದೆ.

ಶೃಂಗೇರಿಯ ಸುತ್ತಮುತ್ತಲಿನ ನಾಲ್ಕು ತಾಲೂಕುಗಳ ಗ್ರಾಮೀಣ ಪ್ರದೇಶದ ಪ್ರೌಢಶಾಲೆಗಳ ಸಹಸ್ರಾರು ಮಂದಿ ವಿದ್ಯಾರ್ಥಿಗಳಿಗೆ ಶ್ರೀಮಠದಿಂದ ಪ್ರತಿನಿತ್ಯ ಶುಚಿ–ರುಚಿಯಾದ ಮಧ್ಯಾಹ್ನದ ಊಟವನ್ನು ಒದಗಿಸಲಾಗುತ್ತಿದೆ. ಊರಿನ ಮತ್ತು ಸಮೀಪದ ಅನೇಕ ಸಾರ್ವಜನಿಕ ಸಭೆ–ಸಮಾರಂಭಗಳಿಗೂ ಇಲ್ಲಿಂದಲೇ ಅಡುಗೆಯ ಪೂರೈಕೆ ನಡೆಯುತ್ತಿದೆ.

**ಇತರ ಚಟುವಟಿಕೆಗಳು**

ಅಶಕ್ತ ವೃದ್ಧರಿಗಾಗಿ ಶೃಂಗೇರಿಯಲ್ಲಿ ಶಾಂತಿನಿಕೇತನ, ಬೆಂಗಳೂರಿನಲ್ಲಿ ವಿದ್ಯಾಭಾರತೀ ಸುರಕ್ಷಾ ವೃದ್ಧಾಶ್ರಮ ದೆಹಲಿಯಲ್ಲಿ ಶ್ರೀ ಶಂಕರ ಆಶ್ರಯಧಾಮ– ಇತ್ಯಾದಿಗಳನ್ನು ನಡೆಸಲಾಗುತ್ತಿದೆ. ಬೆಂಗಳೂರಿನಲ್ಲಿರುವ ವಿದ್ಯಾಭಾರತೀ ಪ್ರೆಸ್ ಶ್ರೀಮಠದ ಒಂದು ಆಂತರಂಗಿಕ ಮುದ್ರಣ ವಿಭಾಗವಾಗಿದ್ದು, ಅದರಲ್ಲಿ ನಾಲ್ಕು ಮತ್ತು ಎರಡು ವರ್ಣಗಳ ಆಫ್‌ಸೆಟ್ ಮುದ್ರಣ ಯಂತ್ರಗಳಿವೆ. ಶ್ರೀಮಠದ ಪುಸ್ತಕಗಳ ಮತ್ತಿತರ ಎಲ್ಲ ಪ್ರಕಟಣೆಗಳ ಮುದ್ರಣ ಇಲ್ಲೇ ನಡೆಯುತ್ತದೆ.

ಶೃಂಗೇರಿಯ ಪರಿಸರ ನಿರ್ವಹಣೆ ಮತ್ತು ನೈಸರ್ಗಿಕ ಸೌಂದರ್ಯರಕ್ಷಣೆ ಶ್ರೀಮಠವು ವಿಶೇಷ ಗಮನವನ್ನು ಹರಿಸುತ್ತಿದೆ. ಪ್ರತಿನಿತ್ಯ ಸಾವಿರಾರು ಮಂದಿ ಯಾತ್ರಿಕರಿಗೆ ಮಾಡಲಾಗುವ ಅಡುಗೆ, ಮಠದ ಆವರಣದ ದೀಪಗಳು ಇವುಗಳಿಗೆಲ್ಲ ಸೌರಶಕ್ತಿಯನ್ನು ಬಳಸಲಾಗುತ್ತಿದೆ. ಸೌರ ಉಪಕರಣಗಳ ಅಳವಡಿಕೆಯಲ್ಲಿ ಜಗತ್ತಿನಾದ್ಯಂತ ಹೆಸರು ಪಡೆದಿರುವ 'ಗಾಧಿಯಾ ಸೋಲಾರ್ ಸಿಸ್ಟಮ್' ಕಂಪೆನಿಯು ಈ ಕುರಿತು ಅಡುಗೆ ಮನೆ ಸಮೀಪ ವಿಶಾಲವಾದ ಸ್ಥಳದಲ್ಲಿ ಸ್ಥಾವರ ಸ್ಥಾಪಿಸಿದ್ದು ಭಾರತದಲ್ಲಿ ಇದು ಮೂರನೇ ದೊಡ್ಡ ಸ್ಥಾವರ ಎನಿಸಿದೆ. (ಇನ್ನೆರಡು ತಿರುಪತಿ ತಿರುಮಲ ದೇವಸ್ಥಾನ ಮತ್ತು ಮೌಂಟ್ ಆಬೂನಲ್ಲಿರುವ ಬ್ರಹ್ಮ ಕುಮಾರೀ ಈಶ್ವರೀಯ ವಿಶ್ವವಿದ್ಯಾನಿಲಯದವು). ಭೋಜನ ಶಾಲೆ, ಅಡುಗೆ ಮನೆ ಇತ್ಯಾದಿಗಳ ಗಲೀಜು ನೀರನೆಲ್ಲ ಸಂಸ್ಕರಿಸಿ, ಅದನ್ನು ಹೂದೋಟಗಳಿಗೆ ಬಳಸಲಾಗುತ್ತಿದೆ. ಮಠದ ಆವರಣದಲ್ಲೆಲ್ಲ ಸ್ವಚ್ಛತೆಗೆ ಆದ್ಯತೆ ನೀಡಲಾಗುತ್ತಿದೆ.

ಶೃಂಗೇರಿ ತಾಲೂಕಿನ ಕೆಲವು ಗ್ರಾಮಗಳನ್ನು ದತ್ತು ಸ್ವೀಕರಿಸಿ, ಅವುಗಳಿಗೆ ರಸ್ತೆ, ಕುಡಿಯುವ ನೀರು, ಶೌಚಾಲಯ, ಆಸ್ಪತ್ರೆ ಮೊದಲಾದ ಸೌಕರ್ಯಗಳನ್ನು ಒದಗಿಸಲಾಗಿದೆ. ದತ್ತಿಗ್ರಾಮಯೋಜನೆ, ಸ್ವಚ್ಛ ಗ್ರಾಮಯೋಜನೆ, ಆಶಕ್ತಶಿಶುಸಂರಕ್ಷಣೆ–ಇವಕ್ಕೆಲ್ಲ ಕೋಟ್ಯಂತರ ರೂಪಾಯಿಗಳನ್ನು ವಿನಿಯೋಗಿಸಲಾಗುತ್ತಿದೆ. ಕಾರ್ಗಿಲ್ ಯೋಧರ ನಿಧಿ, ಗುಜರಾತಿನ ಭೂಕಂಪನಿಧಿ, ಮೊದಲಾದವುಗಳಿಗೆ ಮತ್ತು ಅನೇಕ ಪ್ರಾಕೃತಿಕ ವಿಕೋಪಗಳ ಸಂದರ್ಭದಲ್ಲೆ ಗಮನಾರ್ಹ ಮೊತ್ತದ ದೇಣಿಗೆಯನ್ನು ನೀಡಿದೆ. ಪ್ರತಿವರ್ಷ ಅಂಗವಿಕಲರಿಗೆ ಶ್ರವಣ ಸಾಧನ, ಚತುಶ್ಚಕ್ರ ವಾಹನ, ಆರ್ಥಿಕವಾಗಿ ಅಶಕ್ತರಾದವರಿಗೆ ಹೊಲಿಗೆ ಯಂತ್ರಗಳನ್ನು, ಹೊದೆಯಲು ಕಂಬಳಿಗಳು, ಸೀರೆ–ಬಟ್ಟೆಗಳು– ಇವನ್ನೆಲ್ಲ ಕೊಡಲಾಗುತ್ತಿದೆ. ದೇವಾಲಯಗಳ ಜೀರ್ಣೋದ್ಧಾರ, ಶಾಲೆ–ಕಾಲೇಜುಗಳ ಕಟ್ಟಡ ನಿರ್ಮಾಣ–ಇವಕ್ಕೆಲ್ಲ ಆರ್ಥಿಕ ನೆರವು, ವಿವಾಹ, ಉಪನಯನ, ಮಕ್ಕಳ ಶಿಕ್ಷಣ– ಇತ್ಯಾದಿಗಳಿಗೆ ಯಾರಾದರೂ ಅಶಕ್ತರು ಬಂದು ಅಪೇಕ್ಷಿಸಿದಾಗ ಶ್ರೀಶ್ರೀಗಳವರ ಅನುಗ್ರಹ ರೂಪದ ಧನಸಹಾಯ–ಇವೆಲ್ಲ ಪ್ರತಿನಿತ್ಯ ಎಂಬಂತೆ ನಡೆಯುತ್ತಲೇ ಇರುತ್ತವೆ. ಇಂತಹ ಸಾಮಾಜಿಕ ಚಟುವಟಿಕೆಗಳಿಗೆ ಪ್ರತಿವರ್ಷವೂ ಕೋಟ್ಯಂತರ ರೂಪಾಯಿಗಳನ್ನು ವಿನಿಯೋಗಿಸಲಾಗುತ್ತಿದೆ.

ಹೀಗೆ ಶೃಂಗೇರಿ ಶ್ರೀಶಾರದಾಪೀಠವು ಯಾವುದೇ ಪ್ರಚಾರದ ಹಂಬಲವಿಲ್ಲದೆ, ಸದ್ದು–ಗದ್ದಲ ಆಡಂಬರಗಳಿಂದ ದೂರ ನಿಂತು ಮಾಡುತ್ತಿರುವ ಇಂತಹ ಸಾಮಾಜಿಕ ಚಟುವಟಿಕೆಗಳು ನೂರಾರು ದೇಶದ ಅನೇಕ ಭಾಗಗಳಲ್ಲಿ ಮತ್ತು ಇತ್ತೀಚೆಗೆ ವಿದೇಶಗಳಲ್ಲೂ ಧಾರ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಕಾರ್ಯಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ. ಸನಾತನಧರ್ಮದ ರಕ್ಷಣೆ ಮತ್ತು ಶಾಂಕರತತ್ತ್ವಗಳ ಪ್ರಸಾರಕ್ಕೆ ಬದ್ಧವಾಗಿ ಅದು ನಡೆಸುತ್ತಿರುವ ಈ ಎಲ್ಲ ಕಾರ್ಯಗಳು ಅತ್ಯಂತ ಉಪಯುಕ್ತ ಮತ್ತು ಅನುಕರಣೀಯ. (..ಮುಗಿಯಿತು.)


## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''**ಪಾರಾಯಣ**'' ಸಂಜೆ ಗಂಟೆ 4-30ರಿಂದ

**ತಾ.01-07-2018 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.27-06-2018 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.18-06-2018 ಮತ್ತು ತಾ.03-07-2018 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**



ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ

**ಯಶಸ್ವೀ ಎಂಟರ್‌ಪ್ರೈಸೆಸ್**

ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.

ಇ-ಮೇಲ್ : udayarao42@gmail.com

Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams



*With Best Complimemts From*

SRI M. SHAILESH RAO Ph : 9448624324


B.E., Civil

**Civil Engineer & Contractor**

**SRI MALAVIKA ASSOCIATES**

KALSANKA-UDUPI ROAD, UDUPI.

**Website : shreemaalavikaassociates.com**



SAMPATH KUMAR Mobile : 9741508881

**TRISHULINI TOURIST**

*The Tourist People*

Near Mahishamardhini Temple, Bailur, Udupi.

ALL TYPES OF VEHICLES AVAILABLE FOR HIRE

## ಕಿಗ್ಗ ನಾಗಭೂಷಣ ಶಾಸ್ತ್ರಿ ಸ್ಮರಣಾರ್ಥ ಆಪದ್ಬಾಂಧವ ನಿಧಿ

**ದಿನಾಂಕ 31-03-2018ರ ವರೆಗೆ ದಾನಿಗಳಿಂದ ಬಂದ ಸಹಾಯಧನ ವಿವರ**

| | | |
|---|---|---|
| 1. | ಶ್ರೀ ಸುಬ್ರಹ್ಮಣ್ಯ ಸಭಾ (ರಿ), ಮಂಗಳೂರು | – ರೂ.10,000 |
| 2. | ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಉಡುಪಿ | – ರೂ.10,000 |
| 3. | ಆದಿಶಂಕರ ಸ್ಥಾನಿಕ ಬ್ರಾಹ್ಮಣ ಪರಿಷತ್ (ರಿ.), ಮೂಡುಬಿದ್ರಿ | – ರೂ.20,000 |
| 4. | ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಸುರತ್ಕಲ್ | – ರೂ.10,000 |
| 5. | ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಪಡುಬಿದ್ರಿ | – ರೂ.10,000 |
| 6. | ಶ್ರೀ ನಿರಂಜನ್ ಬೆಳ್ಳೆ, ಮೂಡುಬೆಳ್ಳೆ | – ರೂ.30,000 |
| 7. | ಶ್ರೀ ಎಸ್.ಸುಧೀರ್ ಶಾಸ್ತ್ರಿ, ಬೆಂಗಳೂರು | – ರೂ.10,000 |
| 8. | ಶ್ರೀ ಎನ್.ಶಶಿಶೇಖರ ರಾವ್, ಬೆಂಗಳೂರು | – ರೂ.5,000 |
| 9. | ಬ್ರಹ್ಮಶ್ರೀ ಎಸ್.ವಾಗೀಶ ಶಾಸ್ತ್ರಿ, ಉಡುಪಿ | – ರೂ.10,000 |
| 10. | ಡಾ.ಎಸ್.ವಿ.ಕೆ.ಶಾಸ್ತ್ರಿ, ಬೆಂಗಳೂರು | – ರೂ.10,000 |
| 11. | ಶ್ರೀ ನಾಗೇಶ ಶರ್ಮ, ಮಠಂತಬೆಟ್ಟು | – ರೂ.10,000 |
| 12. | ಶ್ರೀ ಸುಭಾಸ್‌ಚಂದ್ರ ರಾವ್, ಪಂಚವಟಿ, ಕನ್ಯಾಡಿ, ಧರ್ಮಸ್ಥಳ | – ರೂ.10,000 |
| 13. | ಶ್ರೀ ವಿಜಯ ಕುಮಾರ್ ತಂದೆ ಶ್ರೀ ದೇವರಾವ್ ಬೈಲುಮನೆ, ಬೆಳ್ಮಣ್ | – ರೂ.10,000 |
| 14. | ಶ್ರೀ ಎಸ್. ಜನಾರ್ಧನ ರಾವ್, ನಂದಿಕೂರು | – ರೂ.5,000 |
| 15. | ಶ್ರೀ ಜ್ಞಾನೇಶ್ ಕೆ. ಮಂಗಳೂರು | – ರೂ.5,000 |
| 16. | ಡಾ.ಅನಿಲ್ ಕುಮಾರ್, ಮಂಗಳೂರು | – ರೂ.5,000 |
| 17. | ಡಾ.ರಮೇಶ್ ರಾವ್, ಚೆಂಡುಕಳ | – ರೂ.5,000 |
| 18. | ಶ್ರೀ ಕೆ.ವಿ.ಗಣೇಶ್, ಅಧಿಕಾರಿ, ಮೈಸೂರು | – ರೂ.5,000 |
| 19. | ಶ್ರೀ ಎಮ್.ಮೋಹನ್ ರಾವ್, ಉಡುಪಿ | – ರೂ.5,000 |
| 20. | ಡಾ.ವೈ.ಸುದರ್ಶನ್ ರಾವ್, ಉಡುಪಿ | – ರೂ.3,000 |
| 21. | ಶ್ರೀ ಎಸ್.ಸದಾಶಿವ ರಾವ್, ಸಾಂತೂರು | – ರೂ.3,000 |
| 22. | ಕೂಡುಬೆಟ್ಟು ಶ್ರೀ ಸದಾಶಿವ ದೇವಸ್ಥಾನ | – ರೂ.2,000 |
| 23. | ಶ್ರೀ ಬಿ.ಜಯರಾಮ ರಾವ್, ಉಡುಪಿ | – ರೂ.2,000 |
| 24. | ಶ್ರೀ ಅರುಣ್ ಕುಮಾರ್, ಜಡೆಮನೆ, ಕಡಬ | – ರೂ.2,500 |
| 25. | ಶ್ರೀ ಶ್ರೀಹರಿ, ಮಂಗಳೂರು | – ರೂ.3,000 |
| 26. | ಶ್ರೀ ಬಿ.ಶಂಕರ ರಾವ್, ಮುಂಡ್ಕೂರು | – ರೂ.2,000 |
| 27. | ಶ್ರೀ ಪ್ರತಾಪ್ ರಾವ್ | – ರೂ.2,000 |
| 28. | ಶ್ರೀ ದೇವರಾಯ ಶರ್ಮ, ಪಾದೆಬೆಟ್ಟು | – ರೂ.500 |
| 29. | ಶ್ರೀಮತಿ ಲಲಿತಾಂಬ ವೈ.ಶಾಸ್ತ್ರಿ, ಪಡುಬಿದ್ರಿ | – ರೂ.1,000 |
| 30. | ಶ್ರೀ ಅನಂತಪದ್ಮನಾಭ ರಾವ್, ಉದಯಾದ್ರಿ, ಪಡುಬಿದ್ರಿ | – ರೂ.1,000 |
| 31. | ಶ್ರೀ ರಮೇಶ್ ರಾವ್, ದುರ್ಗಾನಿಲಯ, ವಗ್ಗ | – ರೂ.270 |
| 32. | ಶ್ರೀ ಜಿ.ಕೆ ಕೋಲ್ಪೆ, ಉಡುಪಿ | – ರೂ.1,000 |
| 33. | ಶ್ರೀ ಬಿ.ನಿರಂಜನ್ ರಾವ್, ಉಡುಪಿ | – ರೂ.500 |
| 34. | ಶ್ರೀ ಸುರೇಂದ್ರ ಶೆಟ್ಟಿ, ಕೋರಿಕೆಬೆಟ್ಟು ಗುತ್ತು, ಮುಂಡ್ಕೂರು | – ರೂ.1,000 |
| 35. | ಶ್ರೀ ಎಮ್.ಸದಾನಂದ ರಾವ್, ಉಡುಪಿ | – ರೂ1,500 |
| 36. | ಶ್ರೀ ಅರವಿಂದ ರಾವ್, ಉಡುಪಿ | – ರೂ.1,000 |
| 37. | ಶ್ರೀ ಬಿ.ಕೃಷ್ಣಮೂರ್ತಿ ರಾವ್, ಉಡುಪಿ | – ರೂ.1,000 |
| 38. | ಶ್ರೀಮತಿ ಸ್ನೇಹಲತಾ ದಿವಾಕರ ರಾವ್, ಮಂಗಳೂರು | – ರೂ.1,000 |
| 39. | ಶ್ರೀ ಅರವಿಂದ ಶರ್ಮ, ಪಡುಬಿದ್ರಿ | – ರೂ.1,000 |
| 40. | ಶ್ರೀ ಕೃಷ್ಣರಾಜ್ ರಾವ್, ಮುದರಂಗಡಿ | – ರೂ.500 |
| 41. | ಶ್ರೀ ಮಾಧವ ರಾವ್, ಎಲ್ಲೂರು | – ರೂ.500 |
| 42. | ಪಿ.ಬಿ.ವಾಸುದೇವ ರಾವ್, ಪಡುಬಿದ್ರಿ | – ರೂ.500 |

**ಈ ನಿಧಿಗೆ ನಮ್ಮ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಸಹಾಯವನ್ನು ನೀಡಬೇಕೆಂದು ಕೋರಿಕೆ.**
**ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ (ರಿ.), ಪಡುಬಿದ್ರಿ ಶಾಖೆ, ಖಾತೆ ಸಂಖ್ಯೆ 399**

**– ಎಮ್.ಕೆ.ಮೋಹನ್ ರಾವ್**
ಅಧ್ಯಕ್ಷರು, ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಪಡುಬಿದ್ರಿ, ಮೊಬೈಲ್ : 9901395366

## ಬ್ರಹ್ಮೋಪದೇಶ

**ಚಿ| ಶ್ರವಣ್**

ಮುಂಬಯಿ ಪನ್ವೇಲಿನ ಶ್ರೀಮತಿ ಅರುಣಾ ಕೇದಿಗೆ ಹಾಗೂ ಶ್ರೀ ಕೇದಿಗೆ ಮೋಹನ್ ರಾಜ್ ಇವರು ತಮ್ಮ ಪುತ್ರ **ಶ್ರವಣ್**‌ನ ಬ್ರಹ್ಮೋಪದೇಶವನ್ನು ತಾ.02.05.2018ರಂದು ಉಡುಪಿ ರಥಬೀದಿಯ ರಾಘವೇಂದ್ರ ಮಠದಲ್ಲಿ ನೆರವೇರಿಸಿದರು.

**ಚಿ| ರೋಹಿತ್**

ಕಲ್ಮಂಜೆ ಶ್ರೀಮತಿ ಪ್ರತಿಮಾ ಹಾಗೂ ಶ್ರೀ ರಮೇಶ ರಾಯರು ಪಡುಕಲ್ಮಂಜೆಯಲ್ಲಿ ತಾವು ನೂತನವಾಗಿ ನಿರ್ಮಿಸಿದ ಗೃಹ ನಾರಾಯಣ ನಿಲಯದ ಗೃಹ ಪ್ರವೇಶವನ್ನು 09.05.2018ರಂದು ಹಾಗೂ ತಮ್ಮ ಪುತ್ರ **ರೋಹಿತ್**‌ನ ಬ್ರಹ್ಮೋಪದೇಶವನ್ನು 10.05.2018ರಂದು ತಮ್ಮ ನೂತನ ಗೃಹದಲ್ಲಿ ನೆರವೇರಿಸಿದರು.

**ಚಿ| ಸುಷಾನ್**

ಬೆಂಗಳೂರಿನ ಶ್ರೀಮತಿ ಅನಿತಾ ಹಾಗೂ ಶ್ರೀ ಸುಜೀತ್ ಪ್ರಸಾದ್ ಇವರು ತಮ್ಮ ಪುತ್ರ **ಸುಷಾನ್**‌ನ ಬ್ರಹ್ಮೋಪದೇಶವನ್ನು ತಾ.10.05.2018ರಂದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ನೆರವೇರಿಸಿದರು.

**ಚಿ| ಸೌರಭ**

ಕಬ್ಬಿನಾಲೆ ಶ್ರೀಮತಿ ಸಂಧ್ಯಾ ಮತ್ತು ಶ್ರೀ ಉಮೇಶ್ ಹೆಬ್ಬಾರರ ಪುತ್ರ **ಸೌರಭ**ನ ಬ್ರಹ್ಮೋಪದೇಶವನ್ನು ತಾ.13.05.2018ರಂದು ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ಮಂಟಪದಲ್ಲಿ ನೆರವೇರಿಸಿದರು.

## ಶುಭವಿವಾಹ

ಹೊರನಾಡು ಮೂಡಿಗೆರೆಯ ಶ್ರೀಮತಿ ಸರೋಜ ಮತ್ತು ಶ್ರೀ ಪ್ರಭಾಕರ ರಾವ್ ಇವರ ಪುತ್ರ **ಚಿ| ಸುನಿಲ್** ಹಾಗೂ ಶ್ರೀಮತಿ ಸಂಧ್ಯ ಹಾಗೂ ಶ್ರೀ ರಾಘವೇಂದ್ರ ಇವರ ಪುತ್ರಿ **ಚಿ| ಸೌ| ಸ್ವಾತಿ** ಇವರ ವಿವಾಹವು 19.04.2018 ರಂದು ಮೈಸೂರಿನ ಭಾರತಿ ಕನ್ವೆನ್ಷನ್ ಹಾಲ್‌ನಲ್ಲಿ ನೆರವೇರಿತು.

## ನಿಧನ

**ಏರ್ಮಾಳು ಕೃಷ್ಣಮೋಹನರಾಯರು**

ಮುಂಬಯಿಯಲ್ಲಿ ನೆಲೆಸಿದ್ದ ಶ್ರೀ ಏರ್ಮಾಳು ಕೃಷ್ಣಮೋಹನರಾಯರು ತಾ.25.05.2018 ರಂದು ಅಲ್ಪಕಾಲದ ಅಸ್ವಾಸ್ಥ್ಯದಿಂದ ನಿಧನ ಹೊಂದಿದರು.

**ಗುಲಾಬಿ ಅಚ್ಯುತ ಹೆಬ್ಬಾರ್ ಜಂಬೆ**

ಕುಂದಾಪುರ ಕೆರ್ಗಾಲು ಗ್ರಾಮದ ಶ್ರೀಮತಿ ಗುಲಾಬಿ ಅಚ್ಯುತ ಹೆಬ್ಬಾರ್ ಜಂಬೆರವರು ತಾ.31-05-2018ರಂದು ನಿಧನ ಹೊಂದಿದರು.

**ಡಾ| ಅವಿನಾಶ್**

ಉಡುಪಿ ಇಂದ್ರಾಳಿಯ ಶ್ರೀ ಉಮೇಶ ಕುಡಾಲ್‌ರ ಪುತ್ರ, ಯುವ ವೈದ್ಯ ದುಬೈನಲ್ಲಿ ನೆಲೆಸಿದ್ದ ಡಾ| ಅವಿನಾಶ್‌ರವರು ತಾ.02.06.2018ರಂದು ದುಬೈನಲ್ಲಿ ಅಕಾಲಿಕವಾಗಿ ನಿಧನ ಹೊಂದಿದರು. ಉಡುಪಿಯಲ್ಲಿ ಹಲವು ವರ್ಷ ಸೇವೆ ಸಲ್ಲಿಸಿ ಸಮಾಜಬಾಂಧವರ ಪ್ರೀತಿಗೆ ಪಾತ್ರರಾಗಿದ್ದ ಶ್ರೀಯುತರ ನಿಧನಕ್ಕೆ ಸಂಘವು ಸಂತಾಪ ಸೂಚಿಸುತ್ತದೆ. ಶ್ರೀಯುತರು ಮಾತಾಪಿತರು, ಪತ್ನಿ ಹಾಗೂ ಪುಟ್ಟ ಕಂದನನ್ನು ಅಗಲಿದ್ದಾರೆ.

## ಸೀಮಂತೋನ್ನಯನ

ಶ್ರೀಮತಿ ಮತ್ತು ಶ್ರೀ ಕಟೀಲು ಸಿತ್ಲ ಭಾಸ್ಕರರಾಯರು ತಮ್ಮ ಪುತ್ರ ಮಂಜುನಾಥನ ಪತ್ನಿ **ಶ್ವೇತಾ**ಳ ಸೀಮಂತೋನ್ನಯನ ಸಮಾರಂಭವನ್ನು 17.05.2018ರಂದು ಶ್ರೀಶಾರದಾಮಂಟಪದಲ್ಲಿ ನೆರವೇರಿಸಿದರು.




## ಮ.ನಾ.ಹೆಬ್ಬಾರ್‌ರಿಗೆ ಸನ್ಮಾನ

ದಿನಾಂಕ 26-05-2018ರಂದು ಮಂಗಳೂರಿನ ಸುಬ್ರಹ್ಮಣ್ಯ ಸಭಾದಲ್ಲಿ ಜರಗಿದ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಾಹಿತ್ಯೋತ್ಸವದಲ್ಲಿ ನಿವೃತ್ತ ಉಪನ್ಯಾಸಕರೂ, ಖ್ಯಾತ ಹರಿದಾಸರೂ, ಸಾಹಿತಿಗಳೂ ಆದ ಶ್ರೀ ಮ.ನಾ. ಹೆಬ್ಬಾರ್ ಇವರನ್ನು ನೆನಪಿನ ಕಾಣಿಕೆ, ಹಣ್ಣು-ಹಂಪಲುಗಳೊಂದಿಗೆ ಆತ್ಮೀಯವಾಗಿ ಸನ್ಮಾನಿಸಲಾಯಿತು. ಶ್ರೀಯುತರು ಹರಿಕಥೆ, ಯಕ್ಷಗಾನ, ಪ್ರವಚನ, ಭಾಷಣ, ಸಾಹಿತ್ಯ, ಮುಂತಾದ ಕ್ಷೇತ್ರಗಳಲ್ಲಿ ಸಾಧಿಸಿದ ಸಾಧನೆಗಳನ್ನು ಗುರುತಿಸಿ ಈ ಸನ್ಮಾನವನ್ನು ನಡೆಸಲಾಯಿತು.


ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.
N. Laxmi Prasad
ಕಾರ್ಯಕಾರಿಣಿ ಮಂಡಳಿ ಸದಸ್ಯರು
D. K. District Used Vehicle Dealers & Agents Association (R.), Mangalore
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com



ಎಮ್. ದೇವಾನಂದ್ ಭಟ್
Cell : 9845644556
9483913344
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು



RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ
ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ| ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

# ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿನ ಅಪೂರ್ವ ಅನುಭವಗಳು

–ಡಾ. ವೈ. ರವೀಂದ್ರನಾಥ ರಾವ್, ಬ್ರಹ್ಮಾವರ.

ಈ ಹಿಂದೆ ದಕ್ಷಿಣ ಆಫ್ರಿಕಾ, ಸ್ವೀಡನ್ ಮತ್ತು ಜಪಾನ್ ದೇಶಗಳಲ್ಲಿ ಸಂಶೋಧನಾ ಪ್ರಬಂಧ ಮಂಡಿಸಲು ಮತ್ತು ಗೋಷ್ಠಿಗಳ ಅಧ್ಯಕ್ಷನಾಗಿ ಕಾರ್ಯನಿರ್ವಹಿಸಲು ನಾನು ವಿದೇಶ ಪ್ರವಾಸ ನಡೆಸಿದಂತೆ, 2018ರಲ್ಲೂ ಕೆನಡಾದ ಟೊರೊಂಟೊದಲ್ಲಿ ನಡೆಯುವ ವಿಶ್ವಅಧಿವೇಶನದಲ್ಲಿ ಅಗತ್ಯವಾಗಿ ಪಾಲ್ಗೊಳ್ಳುವಂತೆ ನನಗೆ ಆಹ್ವಾನಗಳು, ನೆನಪೋಲೆಗಳು ಬರುತ್ತಲೇ ಇದ್ದವು. ಆದರೆ 2017–2018ನೇ ವರ್ಷಗಳಲ್ಲಿ ನಾನು ಯಾವುದೇ ವಿದೇಶ ಪ್ರಯಾಣ ಕೈಗೊಳ್ಳುವುದಿಲ್ಲವೆಂದು ನಿರ್ಧಾರ ಮಾಡಿದ್ದೆ. ಕಾರಣ ಇಷ್ಟೇ – ಪುತ್ರನ ವಿವಾಹ, ಹಾಗೆಯೇ ಸಮೀಕ್ಷಾ ಸಂಶೋಧನೆಗಳು, ಸಂಶೋಧನಾ ಸಂಯೋಜನೆಗಳು, ಗ್ರಂಥ ರಚನೆ ಇತ್ಯಾದಿ ಕಾರ್ಯಗಳ ಒತ್ತಡಗಳು. ಆದರೆ ದುಬ್ಶೆ ಮತ್ತು ಅಬುದಾಬಿ ನಗರಗಳ ಪ್ರವಾಸಕ್ಕಾಗಿ ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ದೇಶಕ್ಕೆ ಹೋಗುವ ಪ್ರಸ್ತಾಪ ನನ್ನ ಆತ್ಮೀಯ ಗೆಳೆಯ ಡಾ. ರಿಚರ್ಡ್ ಪ್ಯಾಸ್ ಅವರಿಂದ ಬಂದಾಗ ನನ್ನ ನಿರ್ಧಾರವನ್ನು ಸಡಿಲಿಸಬೇಕಾಯಿತು. ಡಾ. ಪ್ಯಾಸ್ ಅವರು ಫೋನ್ ಮೂಲಕ "ದುಬ್ಶೆ ಸಮೂಹ ಟೂರಿಗೆ ನೀವೂ ಬನ್ನಿ ಮತ್ತು ನಿಮ್ಮ ಪತ್ನಿಯನ್ನೂ ಕರೆದುಕೊಂಡು ಬನ್ನಿ" ಎಂದಾಗ ನಾನು ಈ ಹಿಂದೆ ತೆಗೆದುಕೊಂಡಿರುವ ನಿರ್ಧಾರವನ್ನು ಅವರಿಗೆ ಹೇಳಿ ಸುಮ್ಮನಿದ್ದೆ. ಆದರೆ ಕೆಲವು ದಿವಸಗಳ ನಂತರ ಅವರು ಪುನಃ ಫೋನ್ ಮಾಡಿ, ಒತ್ತಾಯಿಸಿದಾಗ, ನಮ್ಮ ಸ್ನೇಹಸಂಬಂಧದ ನಂಟಿನಿಂದಾಗಿ "ಆದೀತು, ನಾನೊಬ್ಬನು ಬರುತ್ತೇನೆ ಪ್ಯಾಸರೆ" ಎಂದು ಹೇಳಿದೆ. ಅವರಿಗೂ ಸಂತೋಷವಾಯಿತು ಮತ್ತು ಇದೊಂದು ನನ್ನ ಜಾಣತನದ ನಿರ್ಧಾರವೆಂದು ನನಗೆ ಪ್ರವಾಸದ ಅನಂತರ ಅರಿವಾಯಿತು.

ನಮ್ಮ ಪ್ರವಾಸವನ್ನು ನಡೆಸುವ ಸಂಸ್ಥೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಯಶಸ್ವಿಯಾಗಿ ಪ್ರವಾಸ ನಡೆಸುವುದರಲ್ಲಿ ಪರಿಣಿತರಾದ "ರಿಯಾ ಟೂರ್ಸ್ ಆ್ಯಂಡ್ ಟ್ರಾವೆಲ್ಸ್" ಆಗಿತ್ತು. ನಮ್ಮ ಪ್ರಯಾಣ 2018 ಜನವರಿ 20, ಬೆಳಿಗ್ಗೆ 6:40ರ ವಿಮಾನದ ಮೂಲಕ ಸಾಗಿ ಬೆಳಿಗ್ಗೆ 11:30 ಗಂಟೆಗೆ ದುಬ್ಶೆ ತಲುಪಿದೆವು. ಈ ಹಿಂದಿನ ನನ್ನ ಎಲ್ಲಾ ವಿದೇಶ ಪ್ರವಾಸಗಳು ಸಂಶೋಧನೆ ಮತ್ತು ಶೈಕ್ಷಣಿಕ ಉದ್ದೇಶಗಳಿಗಾಗಿ ಮಾತ್ರ ನಡೆದಿದ್ದ ಕಾರಣ ಅಲ್ಲಿನ ವಿವಿಧ ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸಲು ನಾನು ಸಮಯವನ್ನು ಸರಿದೂಗಿಸುವ ಕಡೆಯೂ ಗಮನಹರಿಸಬೇಕಾಗಿತ್ತು. ಆದರೆ ನನ್ನ ದುಬ್ಶೆ–ಅಬುದಾಬಿ ಪ್ರವಾಸವು ಈ ದೃಷ್ಟಿಯಲ್ಲಿ ಭಿನ್ನವಾಗಿದ್ದು, ನಿಜ ಅರ್ಥದಲ್ಲಿ ಇದೊಂದು ವಿದೇಶ ಪ್ರವಾಸವೇ ಆಗಿದೆ.

ಯುಎಇಯು ಮರುಭೂಮಿಯನ್ನು ಸುಂದರ ತಾಣವನ್ನಾಗಿ ಪರಿವರ್ತಿಸಿದ ದೇಶ ಎಂದರೆ ತಪ್ಪಾಗಲಾರದು. ಹಾಗೆಯೇ ಇದೊಂದು ವಿದೇಶದಲ್ಲಿ ಅತೀ ಹೆಚ್ಚು ಭಾರತೀಯತೆಯ ಲಕ್ಷಣಗಳನ್ನು ಕಾಣುವ ಮತ್ತು ಅನುಭವಿಸುವ ದೇಶವೂ ಆಗಿದೆ. 26 ಲಕ್ಷ ಮಂದಿ ಭಾರತೀಯರಿರುವ ಈ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ.30 ಮಂದಿ ಭಾರತೀಯರೇ ಆಗಿದ್ದಾರೆ. ದಿರಾಮ್ ಇಲ್ಲಿನ ಹಣದ ಚಲಾವಣೆಯಾಗಿದ್ದು AED ಅದರ ಸಂಕ್ಷಿಪ್ತ ಪದವಾಗಿದೆ. ಒಂದು ದಿರಾಮ್ ಎಂದರೆ ಸುಮಾರು ನಮ್ಮ ದೇಶದ 18 ರೂಪಾಯಿ ಮೌಲ್ಯಕ್ಕೆ ಸಮಾನವಾಗಿದೆ. ಮಂಗಳೂರಿನಿಂದ ಪ್ರಯಾಣದ ಅವಧಿ ಸುಮಾರು 3½ ಗಂಟೆಯಾಗಿದ್ದು ಇಲ್ಲಿನ ಗಡಿಯಾರದ ಸಮಯ ನಮ್ಮ ದೇಶದ ಸಮಯಕ್ಕಿಂತ 1½ ಗಂಟೆ ಹಿಂದೆ ಇರುತ್ತದೆ. ಇಲ್ಲಿನ ರಾಜಕೀಯ ಆಡಳಿತ ವಂಶ ಪಾರಂಪರ್ಯ ರಾಜರುಗಳ ಒಕ್ಕೂಟದ ಸರಕಾರವಾಗಿದೆ. ಈ ದೇಶದ ಏಳು ಅಮಿರೇಟ್ಸ್‌ಗಳೆಂದು ಕರೆಯಲಾಗುವ ಮುಖ್ಯ ಪಟ್ಟಣಗಳು ಮತ್ತು ರಾಜ್ಯಗಳಾದ ಅಬುದಾಬಿ, ಅಜ್‌ಮಾನ್, ಫುಜೈರಾ, ಶಾರ್ಜಾ, ದುಬ್ಶೆ, ರಾಸ್‌ಅಲ್‌ಕೈಮತ್ ಮತ್ತು ಉಮ್‌ಅಲ್ ಕ್ವಾವಾಯಿನ್‌ಗಳ ಅಮೀರರ ಒಂದು ಅತ್ಯುನ್ನತ ಅಧಿಕಾರದ ಒಕ್ಕೂಟದಿಂದಲೇ ಆಡಳಿತ ನಡೆಯುತ್ತದೆ. ಅಬುದಾಬಿ ಯುಎಇ ದೇಶದ ರಾಜಧಾನಿಯಾಗಿದೆ. ಇಲ್ಲಿನ ನಗರಾಭಿವೃದ್ಧಿ, ವಾಣಿಜ್ಯ, ಪೆಟ್ರೋಲಿಯಂ, ಆರೋಗ್ಯ, ಶಿಕ್ಷಣ, ಸಾರಿಗೆ, ಇತ್ಯಾದಿ ಇಲಾಖೆಗಳ ಪ್ರಮುಖರು ಹೆಚ್ಚಾಗಿ ಅಮೇರಿಕನ್‌ರವರು ಮತ್ತು ಯುರೋಪಿಯನ್‌ರವರಾಗಿದ್ದುದರಿಂದ ಇಲ್ಲಿನ ಬಹುತೇಕ ಯೋಜನೆಗಳು ಮತ್ತು ಅವುಗಳ ಅನುಷ್ಠಾನ ಉತ್ತಮ ಗುಣಮಟ್ಟದ್ದಾಗಿವೆ. ಮಳೆ ಅತೀ ಕಡಿಮೆಯಾದುದರಿಂದ ಮಳೆನೀರಿನ ಸಂಚಾರಕ್ಕಿರುವ ಚರಂಡಿ ವ್ಯವಸ್ಥೆಗಳಿಲ್ಲ. ಪೆಟ್ರೋಲಿಯಂ ಉತ್ಪನ್ನಗಳು ಸದ್ಯಕ್ಕೆ ಸಾಕಷ್ಟಿರುವ ಕಾರಣ ಡಿಸೀಲ್‌ನಿಂದ ಉತ್ಪಾದಿಸುವ ವಿದ್ಯುಚ್ಛಕ್ತಿ ದೇಶಕ್ಕೆ ಪೂರೈಕೆಯಾಗುತ್ತದೆ. ಪೆಟ್ರೋಲಿಯಂ ಉತ್ಪನ್ನಗಳ ಉತ್ಪಾದನೆ ಮತ್ತು ಲಭ್ಯತೆಯು ಸ್ವಲ್ಪಮಟ್ಟಿಗೆ ಇಳಿಮುಖವಾಗುತ್ತಿರುವ ಕಾರಣದಿಂದಲೇ ಕೊಲ್ಲಿ ದೇಶಗಳು ಈಗ ಪ್ರವಾಸೋದ್ಯಮಗಳನ್ನು ಪ್ರೋತ್ಸಾಹಿಸುತ್ತವೆ. ನೀರಿನ ಮೂಲ, ಸಮುದ್ರದ ಉಪ್ಪು ನೀರನ್ನು ಸಿಹಿನೀರನ್ನಾಗಿ ಪರಿವರ್ತಿಸಿ (Desalination) ಅದನ್ನು ಸಾರ್ವಜನಿಕರಿಗೆ ಪೂರೈಕೆ ಮಾಡಲಾಗುತ್ತದೆ. ಅರೇಬಿಕ್ (ಪರ್ಶಿಯನ್) ಇಲ್ಲಿನ ಅಧಿಕೃತ ಭಾಷೆ. ಇಂಗ್ಲಿಷ್, ಪರ್ಶಿಯನ್, ಉರ್ದು ಮತ್ತು ಹಿಂದಿ ಇಲ್ಲಿನ ಅಂಗೀಕೃತ ರಾಷ್ಟ್ರೀಯ ಭಾಷೆಗಳಾಗಿದ್ದರೂ, ಇತರ ಕೊಲ್ಲಿದೇಶಗಳಲ್ಲಿರುವಂತೆ ಎಲ್ಲಾ ನಾಮಫಲಕಗಳು ಪರ್ಶಿಯನ್ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಮಾತ್ರ ಇರುತ್ತವೆ.

ದುಬ್ಶೆ ವಿಮಾನ ನಿಲ್ದಾಣದ ವ್ಯಾಪ್ತಿ, ಆವರಣ ಬಹಳ ವಿಶಾಲವಾಗಿದ್ದು, ಅಲ್ಲಿಂದ ಹೊರಗೆ ಬಂದ ಬಳಿಕ ಗಿಡ್ಡ ಜಾತಿಯ ತಾಳೆವೃಕ್ಷಗಳು, ಖರ್ಜೂರದ ಮರಗಳೊಂದಿಗೆ ಕಾಣುವ ರಸ್ತೆಗಳು, ಭವ್ಯವಾದ ಕಟ್ಟಡಗಳನ್ನೆಲ್ಲಾ




ನೋಡುವಾಗ ಇದೊಂದು ವ್ಯವಸ್ಥಿತವಾದ ನಗರ ಯೋಜನೆಯಿಂದ ನಿರ್ಮಿಸಿದ ನಗರವೆಂಬುವುದಾಗಿ ಗೋಚರವಾಗುತ್ತದೆ. ದಾರಿಯಲ್ಲಿ ಮುಂದೆ ಸಂಚರಿಸುವಾಗ ಯುಎಇ ರಾಜ ಇಂಗ್ಲೆಂಡಿನ ವಿಕ್ಟೋರಿಯಾ ರಾಣಿಯಿಂದ ಖರೀದಿಸಿದ ಬೃಹತ್ತಾದ ಹಡಗೊಂದನ್ನು ನೋಡಿದೆವು. ಮುಂದೆ ಈ ಹಡಗನ್ನು ಒಂದು ವಿಲಾಸಿದರ್ಜೆಯ ಹೋಟೆಲನ್ನಾಗಿ ನಿರ್ಮಿಸುವ ಯೋಜನೆ ಇದೆ ಎಂದೂ ತಿಳಿಯಿತು.

ನಾವು ಉಳಿದುಕೊಂಡಿದ್ದ ಹೋಟೆಲ್ "ಸ್ಯಾಪ್ರೋನ್ ಬೂಟಿಕ್". ಇದು "ದೇರಾ" ಸ್ಥಳದ ಅಲ್ ಖತಾಬ್ ರಸ್ತೆಯಲ್ಲಿದೆ. ಇದು ಸುಮಾರು 7–8 ರಸ್ತೆಗಳು ಕೂಡುವ ಒಂದು ವಿಶಾಲ ಪ್ರದೇಶವಾಗಿದೆ. "ದೇರಾ" ದುಬ್ಶೆಯ ಮಧ್ಯಭಾಗದ ಸ್ಥಳವಾಗಿದ್ದು ಇದು ವಿಮಾನ ನಿಲ್ದಾಣ, ಗೋಲ್ಡ್ ಸೂಕ್ ಮತ್ತು ಇತರ ಮಾರುಕಟ್ಟೆಗಳಿಗೆ ಹತ್ತಿರವಾಗಿದೆ. ಸ್ಯಾಪ್ರೋನ್ ಬೂಟಿಕ್ ಹೋಟೇಲು ಭಾರತೀಯ – ಚೀನ ರೆಸ್ಟೋರೆಂಟ್, ಜಿಮ್, ಈಜುಕೊಳ, ಇತ್ಯಾದಿ ಸೌಕರ್ಯಗಳನ್ನು ಹೊಂದಿದ ಚತುರ್ಥ ತಾರಾದರ್ಜೆಯ ಉತ್ತಮ ಹೋಟೆಲು ಆಗಿತ್ತು. ನಮ್ಮ ತಂಡದವರಲ್ಲಿ ಹೆಚ್ಚಿನವರು ಕುಟುಂಬ ಸಮೇತರಾಗಿ ಬಂದಿದ್ದ ಕಾರಣ ನಮ್ಮೊಂದಿಗೆ ಬಂದಿದ್ದ ಮಂಗಳೂರಿನ ಟೂರ್ ಸಂಯೋಜಕ ನವೀನ್ ಜೊತೆ ನಾನು ಕೊಠಡಿಯನ್ನು ಹಂಚಿಕೊಂಡಿದ್ದೆ. ನವೀನ್ ಪ್ರವಾಸೋದ್ಯಮ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದ ಬಹಳ ಚುರುಕಿನ ಗೈಡ್ ಆಗಿದ್ದರು. ಸುಮಾರು 20–30 ಗಾತ್ರದ ಉತ್ತಮ ಕಾರ್ಪೆಟ್ ಹೊಂದಿದ, ಸೇಫ್‌ಲಾಕರ್, ಫ್ರೀಜ್, ಟಬ್‌ಬಾತ್ ಇತ್ಯಾದಿ ಎಲ್ಲಾ ಸೌಕರ್ಯಗಳನ್ನೊಳಗೊಂಡ ಸಾಕಷ್ಟು ದೊಡ್ಡದಾಗಿದ್ದ ಈ ಕೊಠಡಿಯು ಸ್ವಲ್ಪ ಮಟ್ಟಿಗೆ ನನ್ನ ಮುಂಜಾನೆಯ ವಾಕಿಂಗ್‌ಗೂ ಅನುಕೂಲವಾಗಿತ್ತು.

ನಮ್ಮ ಪ್ರಥಮ ದಿವಸದ ತಿರುಗಾಟದಲ್ಲಿ ಪ್ರಮುಖವಾಗಿದ್ದದ್ದು ಮುಸ್ಸಂಜೆಯ ದುಬ್ಶೆ ಕ್ರೀಕ್ (creak) ನಲ್ಲಿನ ಡೌಕ್ರೂಸ್ (dhow/dow cruise)ನ ವಿಹಾರ. ಡೌಕ್ರೂಸ್ ಒಂದು ತೇಲುತ್ತಿರುವ ರೆಸ್ಟೋರೆಂಟ್ (floating restaurant). ಕ್ರೀಕ್ ಎಂದರೆ ಸಮುದ್ರದ ಕೊಲ್ಲಿ ಅಥವಾ ಹೊಳೆ ಎಂದರ್ಥ. ಕ್ರೂಸ್ ಎಂದರೆ ಸಮುದ್ರದಲ್ಲಿ ಸಂಚರಿಸುವ ಹಡಗು. ಆದರೆ ಇಲ್ಲಿ "ಕ್ರೂಸ್" ಜೊತೆ "ಡೌ" ಎಂಬ ಒಂದು ವಿಶೇಷಣ ಸೇರಿಕೊಂಡಿದೆ. ಅರೇಬಿಯಾ ದೇಶದ ಚಿಕ್ಕ ಹಡಗಿಗೆ "ಡೌ" ಎನ್ನುತ್ತಾರೆ. ಅರೇಬಿಕ್ ಮೂಲ ಪದ "ಅಲ್ಕೋಹಾಲ್" (ಅಲ್–ಕೊಹಲ್) ಪದದಂತೆ ಇನ್ನೂ ಅನೇಕ ದೇಶಗಳ ಭಾಷೆಗಳು ಇಂಗ್ಲಿಷ್ ಭಾಷೆಯೊಳಗೆ ಸೇರಿಕೊಂಡಂತೆ ಈಗ "ಡೌ" ಕೂಡ ಪದವಾಗಿ ಸ್ವೀಕಾರಗೊಂಡಿದೆ. ಈ "ಡೌಕ್ರೂಸ್" ನಲ್ಲಿ ನಮ್ಮ ತಂಡಕ್ಕೆ ನಿಗದಿಯಾದ ಆಸನಗಳು ಮೇಲಂತಸ್ತಿನಲ್ಲಿದ್ದವು. ಕೆಳಗಿನ ಮತ್ತು ಮೇಲಂತಸ್ತು ಸೇರಿ ಸುಮಾರು 100 ಜನ ಆಸೀನರಾಗಿರುವ ವಿವಿಧ ಬೆಳಕುಗಳಿಂದ ಅಲಂಕರಿಸಿದ ಹಡಗು ಇದಾಗಿತ್ತು. ಇಂತಹ ಅನೇಕ ಹಡಗುಗಳು ಈ ಕ್ರೀಕ್‌ನಲ್ಲಿ ತೇಲುತ್ತಿರುತ್ತವೆ. ಕ್ರೂಸ್, ಈ ಕೊಲ್ಲಿಯ ಎಲ್ಲೆಡೆಗಳಲ್ಲಿ ತೇಲುತ್ತಾ ಸಂಚರಿಸುತ್ತಾ, ಹಿಂದಿ ಅಥವಾ ಅರಬೀ ಜಾನಪದ–ಭಕ್ತಿ ಸಂಗೀತದ ಹಿನ್ನಲೆಯೊಂದಿಗೆ ಏಕವ್ಯಕ್ತಿಯಿಂದ ಇಲ್ಲಿನ "ತನೂರ" ಎಂಬ ಅರಬೀ ನೃತ್ಯ ಪ್ರದರ್ಶನದ ನಂತರ ನಮಗೆಲ್ಲಾ ರಾತ್ರಿ ಕೂಸ್‌ನಲ್ಲೇ ಬಫೆ ಊಟ ಏರ್ಪಾಡಾಗಿತ್ತು. ನೃತ್ಯದ ಪ್ರಾರಂಭದಲ್ಲಿ ಜೂಸ್ ಮತ್ತು ಸ್ನಾಕ್ಸ್‌ದೊಂದಿಗೆ ನಮ್ಮನ್ನೆಲ್ಲಾ ಸ್ವಾಗತಿಸಲಾಗಿತ್ತು. ಇದೊಂದು ಕುಟುಂಬ ಸಮೂಹದವರು, ಮಧುಚಂದ್ರಕ್ಕೆ ಬರುವ ನೂತನ ವಧೂವರರು ಮತ್ತು ಎಲ್ಲಾ ಪ್ರವಾಸಿಗರು ಸೇರಿ ಬಹಳ ಖುಷಿಪಡುವ ತಾಣವಾಗಿದೆ. ಈ ಕ್ರೀಕ್‌ನ ಸುತ್ತಮುತ್ತ ಕ್ರೂಸ್ ಚಲಿಸುತ್ತಿರುವಾಗ ಸುಂದರ ನಗರದ ದೃಶ್ಯಗಳನ್ನು, ತೇಲುತ್ತಿರುವ ಇತರ ಸುಂದರ ಕ್ರೂಸ್‌ಗಳನ್ನು ನೋಡಿ ಸಂತೋಷದ ಸವಿಯನ್ನು ಅನುಭವಿಸಬಹುದು.

(ಮುಂದುವರಿಯುವುದು...)

ಶುಭಾಶಯಗಳೊಂದಿಗೆ
ಹೆಬ್ಬಾರ್ ಎಂಟರ್‌ಪ್ರೈಸಸ್
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ–576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894

Buying and selling shares as easy as checking your emails
Sharekhan Online Trading Account Features:
⇨ Your bank account gets directly linked to trading account
⇨ Can do direct fund transfer from any of 11 leading banks
⇨ Choose your trading account, Classic, FastTrade, TradeTiger
⇨ Apply online for Stocks, Mutual Funds and IPO's
Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)

## ಲಯನ್ಸ್ ವಲಯಾಧ್ಯಕ್ಷರಾಗಿ ಡಾ| ಸಂತೋಷ್ ಅಡೂರು ಆಯ್ಕೆ



ಲಯನ್ಸ್ ಕ್ಲಬ್ 317ಡಿ ಪ್ರಾಂತ್ಯ 10 ವಲಯದ ವಲಯಾಧ್ಯಕ್ಷರಾಗಿ ಶ್ರೀಯುತ ಡಾ| ಸಂತೋಷ್‌ಕುಮಾರ್ ಇವರು ಆಯ್ಕೆಯಾಗಿದ್ದಾರೆ. ಶ್ರೀಯುತರು ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಮುದಾಯದ ಮುಖಂಡರಾದ ದಿ| ಅಡೂರು ಶ್ರೀಧರ ರಾಯರ ಪುತ್ರರಾಗಿದ್ದು ಬೈಲೂರು ಲಯನ್ಸ್ ಕ್ಲಬ್‌ನ ಅಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ, ಕೋಶಾಧಿಕಾರಿಯಾಗಿ ಸೇವೆ ಸಲ್ಲಿಸಿರುತ್ತಾರೆ. ಇವರು ಅತ್ಯುತ್ತಮ ಅಧ್ಯಕ್ಷ ಮತ್ತು ಅತ್ಯುತ್ತಮ ಕೋಶಾಧಿಕಾರಿ ಪ್ರಶಸ್ತಿಗೆ ಭಾಜನರಾಗಿದ್ದರು. ಇವರ ಅಧ್ಯಕ್ಷತೆಯಲ್ಲಿ ಬೈಲೂರು ಲಯನ್ಸ್ ಕ್ಲಬ್ ಅತ್ಯುತ್ತಮ ಕ್ಲಬ್ ಪ್ರಶಸ್ತಿಯನ್ನು ಪಡೆದಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಇವರೊಬ್ಬ ಉತ್ತಮ ವಾಗ್ಮಿಯಾಗಿದ್ದು ಹವ್ಯಾಸಿ ಯಕ್ಷಗಾನ ಕಲಾವಿದರೂ ಹೌದು. ಉತ್ತಮ ಸಂಘಟಕರಾದ ಇವರ ಅಧ್ಯಕ್ಷೀಯ ಅವಧಿಯ ಉತ್ತಮ ನಿರ್ವಹಣೆಯನ್ನು ಗಮನಿಸಿ ಇವರಿಗೆ ಈ ಹುದ್ದೆ ನೀಡಲಾಗಿದೆ.

## ವೈ. ಮೋಹನ ರಾಯರಿಗೆ ಬೀಮರಥೀ ಶಾಂತಿ



ನಮ್ಮ ಪತ್ರಿಕೆಯ ಸಂಪಾದಕರಾದ ಶ್ರೀ ವೈ. ಮೋಹನ ರಾಯರು ತಮಗೆ 70 ಸಂವತ್ಸರಗಳು ಪೂರ್ತಿಯಾದ ಶುಭಗಳಿಗೆಯನ್ನು ಉಡುಪಿ ಶ್ರೀಶಾರದಾಮಂಟಪದಲ್ಲಿರುವ ಜ್ಞಾನಮಂದಿರದಲ್ಲಿ ಕುಟುಂಬಸ್ಥರೊಂದಿಗೆ ಬೀಮರಥೀ ಶಾಂತಿಯನ್ನು ನೆರವೇರಿಸಿ ಆಚರಿಸಿದರು. ಈ ಸಂದರ್ಭದಲ್ಲಿ ಶ್ರೀಯುತರನ್ನು ಶ್ರೀಶಾರದಾ ಕೋ-ಆಪರೇಟಿವ್ ಸೊಸೈಟಿಯ ಆಡಳಿತ ಮಂಡಳಿಯ ನಿರ್ದೇಶಕರು ವಿಶೇಷವಾಗಿ ಅಭಿನಂದಿಸಿದರು.

## ಬ್ಯಾಂಕ್ ಆಫ್ ಬ್ಯುರೋದ ಸದಸ್ಯರಾಗಿ ಶ್ರೀ ಪ್ರದೀಪ್ ಕುಮಾರ್



ಪಂಜದವರಾದ ಶ್ರೀ ಪ್ರದೀಪ್ ಕುಮಾರ್ ಇವರನ್ನು ಕೇಂದ್ರ ಸರಕಾರದ ಮಂತ್ರಿಮಂಡಳದ ನೇಮಕಾತಿ ಸಮಿತಿಯು ಬ್ಯಾಂಕ್ ಆಫ್ ಬ್ಯುರೋದ ಸದಸ್ಯನಾಗಿ ಎರಡು ವರ್ಷಗಳ ಅವಧಿಗೆ ನೇಮಿಸಿದೆ. ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ವ್ಯವಹಾರ ಕೌಶಲ್ಯದ ಅಭಿವೃದ್ಧಿಗೆ ಯೋಜನೆ, ಸಲಹೆ ಸೂಚನೆಗಳನ್ನು ನೀಡುವುದು ಇದರ ಜವಾಬ್ದಾರಿಯಾಗಿದೆ. ಶ್ರೀಯುತರು ಭಾರತೀಯ ಸ್ಟೇಟ್‌ಬ್ಯಾಂಕ್‌ನ ಉನ್ನತ ಅಧಿಕಾರಿಯಾಗಿ ನಿವೃತ್ತರಾದವರು. ಬೆಂಗಳೂರಿನ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾದ ಉಪಾಧ್ಯಕ್ಷರು.

## ಅಭಿನಂದನೆಗಳು



### ದೀಪಾಲಿ ಎಸ್.ರಾವ್

ಎರ್ಮಾಳು ಪ್ರವೀಣ್ ಎಸ್.ರಾವ್ ಹಾಗೂ ಆಶಾ ಪಿ.ರಾವ್‌ರವರ ಪುತ್ರಿ, ಅದಮಾರು ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿನಿ ದೀಪಾಲಿ ಎಸ್.ರಾವ್ ಇವರು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 93% ಅಂಕಗಳೊಂದಿಗೆ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಾಳೆ. ಇವಳಿಗೆ ಶ್ರೀ ಶಾರದಾ ಬಳಗದ ಅಭಿನಂದನೆಗಳು.



### ಚಿನ್ಮಯ ಆರ್.ರಾವ್

ಪೆರ್ಡೂರು ರಾಮಮೂರ್ತಿ ರಾವ್ ಹಾಗೂ ಶ್ರೀಮತಿ ಅನುರಾಧಾ ಆರ್.ರಾವ್ ರವರ ಪುತ್ರ, ಪೆರ್ಡೂರು ಪ್ರೌಢ ಶಾಲೆಯ ವಿದ್ಯಾರ್ಥಿ ಚಿನ್ಮಯ ಆರ್.ರಾವ್ ಇವರು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 617/625 ಅಂಕಗಳೊಂದಿಗೆ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣನಾಗಿದ್ದಾನೆ. ಇವನಿಗೆ ಶ್ರೀ ಶಾರದಾ ಬಳಗದ ಅಭಿನಂದನೆಗಳು.



### ಶ್ರೀಲಕ್ಷ್ಮಿ

ಕುಂದಾಪುರ ತಾಲೂಕು ಮರೂರು ಶ್ರೀಮತಿ ಉಷಾ (ಶಿಕ್ಷಕಿ) ಮತ್ತು ಶ್ರೀ ಶ್ರೀಧರ ಹೆಬ್ಬಾರರ ಮಗಳು ಶ್ರೀಲಕ್ಷ್ಮಿಯು ಪದವಿಪೂರ್ವ (ದ್ವಿತೀಯ) ಪರೀಕ್ಷೆಯಲ್ಲಿ 600ಕ್ಕೆ 577 (ಸಂಸ್ಕೃತ 99, ಇಂಗ್ಲೀಷ್-94, ಫಿಸಿಕ್ಸ್-96, ಕೆಮೆಸ್ಟ್ರಿ-95, ಗಣಿತ-100, ಕಂಪ್ಯೂಟರ್ ಸಯನ್ಸ್-93, ಜುಮ್ಲಾ-577 (96.16%) ಅಂಕ ಗಳಿಸಿ ಉತ್ತೀರ್ಣಳಾಗಿರುತ್ತಾಳೆ. ಇವಳಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.



### ಪ್ರಣಮ್ಯ ಭಂಡಿ

ಈ ವರ್ಷ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪೆರ್ಡೂರಿನ ಪ್ರಣಮ್ಯ ಭಂಡಿ ಗಣಿತದಲ್ಲಿ 100 ಅಂಕ ಗಳೊಂದಿಗೆ ಶೇಕಡಾ 93.92 ಅಂಕಗಳಿಸಿ ಶಾಲೆಗೆ ದ್ವಿತೀಯ ಸ್ಥಾನವನ್ನು ಪಡೆದಿರುತ್ತಾಳೆ. ಪ್ರಸ್ತುತ ಇವಳು ಎಸ್.ಆರ್. ಆಂಗ್ಲ ಮಾಧ್ಯಮ ಶಾಲೆ ಹೆಬ್ರಿಯ ವಿದ್ಯಾರ್ಥಿನಿ.

ಈಕೆ ಸಿಂಡಿಕೇಟ್ ಬ್ಯಾಂಕ್ ಪ್ರಧಾನ ಕಛೇರಿ ಮಣಿಪಾಲ ಇಲ್ಲಿ ಹಿರಿಯ ಪ್ರಬಂಧಕರಾಗಿರುವ ಪೆರ್ಡೂರು ರವೀಂದ್ರ ಭಂಡಿ ಹಾಗೂ ಶ್ರೀಮತಿ ವಾಣಿ ಭಂಡಿ ದಂಪತಿಗಳ ಸುಪುತ್ರಿ. ಇವಳಿಗೆ ಶ್ರೀಶಾರದ ಬಳಗದ ಅಭಿನಂದನೆಗಳು.

## ಡಾ| ಪ್ರಶಾಂತ್ ಎ.ಎಸ್. ಇವರಿಂದ ಅಮೆರಿಕಾದಲ್ಲಿ ಪ್ರಬಂಧ ಮಂಡನೆ



ಹುಬ್ಬಳ್ಳಿ ಆಯುರ್ವೇದ ಮಹಾ ವಿದ್ಯಾಲಯದ ಕಾಯಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ| ಪ್ರಶಾಂತ್ ಎ.ಎಸ್.ರವರು ಅಮೇರಿಕಾದ ಪೆನ್ಸಲ್ವೇನಿಯಾ ರಾಜ್ಯದ ಬೆತ್ಲೆಹ್‌ಂನಲ್ಲಿ ನಡೆದ ಅಂತರಾಷ್ಟ್ರೀಯ ಆಯುರ್ವೇದ ಸಮ್ಮೇಳನದಲ್ಲಿ ಸ್ಥನಅರ್ಬುದ ರೋಗಕ್ಕೆ ಆಯುರ್ವೇದ ಶಾಸ್ತ್ರದ ಪರಿಹಾರದ ವಿಷಯವಾಗಿ ಪ್ರಬಂಧ ಮಂಡನೆ ಮಾಡಿದರು. ಇವರಿಗೆ ಇದೇ ಸಂದರ್ಭದಲ್ಲಿ ಅಮೇರಿಕಾದ ಎಎಪಿಎನ್‌ಎ ಸಂಸ್ಥೆಯು ಚರಕ ಪ್ರಶಸ್ಥಿ ನೀಡಿ ಗೌರವಿಸಿತು. ಇವರು ಪ್ರಸ್ತುತ ರಾಜೀವ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಆಯುರ್ವೇದ ಅಧ್ಯಯನ ಪೀಠದ ಚೇರ್ಮನ್ ಹಾಗೂ ಭಾರತೀಯ ಚಿಕಿತ್ಸಾ ಪದ್ಧತಿಗಳ ಕೇಂದ್ರ ಪರಿಷತ್ತಿನ ಸದಸ್ಯರು ಆಗಿರುತ್ತಾರೆ. ಇವರು ಮೂಲತಃ ಅಡೂರಿನವರು.

With Best Compliments From :

***Rajathadri Hotel Pvt. Ltd.
Lodging & Boarding

Sri Ramesh Shanubhag, Usha, Sanketh and Kavitha
Directors



OUR FACILITIES
★ A/c Rooms ★ Deluxe Rooms ★ 3, 4, 5 Cot Rooms
★ Room Service ★ T.V. with Cable Connection ★ Hot Water

SHIVAJI CIRCLE, POWAI NAKA, SATARA-415001
Ph : 02162-234017, 233818
Fax : 02162-233885 E-mail : rajathadri.satara@gmail.com

## ಪಡುಬಿದ್ರೆ ಸಂಘದ ವಾರ್ಷಿಕೋತ್ಸವ



ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರೆಯ ವಾರ್ಷಿಕೋತ್ಸವವು ತಾ.03–06–2018ರಂದು ಪಡುಬಿದ್ರೆ ಪ್ರಸನ್ನ ಪಾರ್ವತಿ ಬಾಲಗಣಪತಿ ದೇವಸ್ಥಾನದ ಸಭಾಂಗಣದಲ್ಲಿ ಸಂಘದ ಗೌರವಾಧ್ಯಕ್ಷರಾದ ಶ್ರೀ ಪಿ.ಬಿ.ವಾಸುದೇವರಾವ್ ಹಾಗೂ ಅಧ್ಯಕ್ಷರಾದ ಶ್ರೀ ಎಂ.ಕೆ.ಮೋಹನ ರಾವ್ ಇವರ ನೇತೃತ್ವದಲ್ಲಿ ನೆರವೇರಿತು. ಕಾರ್ಯಕ್ರಮವು ಮಕ್ಕಳ ಪ್ರಾರ್ಥನೆಯೊಂದಿಗೆ ಆರಂಭಗೊಂಡಿತು. ಶ್ರೀಮತಿ ರಮ್ಯ ಅರುಣ್ ರಾವ್ ಗತವರ್ಷದ ವರದಿಯನ್ನು ವಾಚಿಸಿದರು. ಜೊತೆ ಕೋಶಾಧಿಕಾರಿ ಶ್ರೀ ಅರವಿಂದ ರಾವ್ ಆಯವ್ಯಯ ಮಂಡಿಸಿದರು. ಈ ಕಾರ್ಯಕ್ರಮವನ್ನು ಶ್ರೀಮತಿ ಲಲಿತಾಂಬಾ ಶಾಸ್ತ್ರಿಯವರು ನಿರೂಪಿಸಿದರು. ಶ್ರೀ ಅರುಣ್‌ಕುಮಾರ್ ಧನ್ಯವಾದವಿತ್ತರು. ಶ್ರೀಮತಿ ಸೀತಾದೇವಿ ಭಾಸ್ಕರ ರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ನಂತರ ನಡೆದ ಎಂಟನೇ ವರ್ಷದ ವಾರ್ಷಿಕೋತ್ಸವ ಸಮಾರಂಭದಲ್ಲಿ ಪಡುಬಿದ್ರೆ ಸರಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಡಾ। ಬಿ. ಬಾಲಕೃಷ್ಣ ರಾವ್ ಹಾಗೂ ಬ್ರಹ್ಮಾವರದ ನಿವೃತ್ತ ಪ್ರಾಂಶುಪಾಲರಾದ ಡಾ.ವೈ.ರವೀಂದ್ರನಾಥ ರಾವ್‌ರವರು ಅತಿಥಿಗಳಾಗಿ ಆಗಮಿಸಿದ್ದರು. ಕರ್ನಾಟಕ ಬ್ಯಾಂಕಿನ ಜನರಲ್ ಮ್ಯಾನೇಜರ್ ಶ್ರೀ ಬೊಕ್ಕಸ ಚಂದ್ರಶೇಖರ ರಾಯರು ಸಭೆಯ ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು. ನಮ್ಮ ಸಮಾಜದ ಹಲವಾರು ದೇವಸ್ಥಾನಗಳನ್ನು ಪುನರುಜ್ಜೀವನಗೊಳಿಸಿದ ಸಾಧಕ, ಶ್ರೀ ಸುಬ್ರಹ್ಮಣ್ಯ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಇವರನ್ನು ಮನಪೂರ್ವಕವಾಗಿ ಅಭಿನಂದಿಸಿ ಸನ್ಮಾನಿಸಲಾಯಿತು. ಶ್ರೀಮತಿ ಸುಮಂಗಲಾ ಎನ್.ರವರು ಸನ್ಮಾನ ಪತ್ರವನ್ನು ವಾಚಿಸಿದರು. ಕರುಣ್ ರಾವ್ ಬೆಳ್ಳೆಯವರ ಬಗ್ಗೆ ಅವರ ಸಹೋದರಿ ಶ್ರೀಮತಿ ಸ್ನೇಹಲತಾ ದಿವಾಕರ ರಾವ್‌ರವರು ಬರೆದ ಕವನವನ್ನು ವಾಚಿಸಿದರು.

ಈ ವರ್ಷ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕರ್ನಾಟಕಕ್ಕೆ ದ್ವಿತೀಯ ಸ್ಥಾನವನ್ನು ಗಳಿಸಿದ ಕುಮಾರಿ ಅದಿತಿ ರಾವ್‌ಳನ್ನು ಅಭಿನಂದಿಸಿ ಸನ್ಮಾನಿಸಲಾಯಿತು. ಸನ್ಮಾನಿತರು ತಮ್ಮ ಅನಿಸಿಕೆಗಳನ್ನು ತಿಳಿಸಿ, ಸಂಘಕ್ಕೆ ಧನ್ಯವಾದಗಳನ್ನು ತಿಳಿಸಿದರು. ಸಂಘದ ವ್ಯಾಪ್ತಿಗೆ ಬರುವ ಸಮಾಜಬಾಂಧವರ ಮಕ್ಕಳಿಗೆ ಪ್ರೋತ್ಸಾಹ ಧನವನ್ನು ವಿತರಿಸಲಾಯಿತು. ಶೈಕ್ಷಣಿಕವಾಗಿ ಸಾಧನೆಗೈದ ವಿದ್ಯಾರ್ಥಿಗಳನ್ನು ಗುರುತಿಸಿ ಸನ್ಮಾನಿಸಲಾಯಿತು. ವಿವಿಧ ಆಟೋಟ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಮಾಡಲಾಯಿತು. ಕೊನೆಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಎಂ.ಕೆ.ಮೋಹನ್ ರಾಯರು ಮಾತನಾಡಿ ಎಲ್ಲರನ್ನೂ ಅಭಿನಂದಿಸಿದರು. ಶ್ರೀ ಗಣೇಶ್ ಭಟ್ ಪಾರ್ಥನೆಗೈದರು. ಸಂಘದ ಉಪಾಧ್ಯಕ್ಷರಾದ ಶ್ರೀ ವೈ.ವಿ.ಸುಬ್ಬರಾವ್ ಸ್ವಾಗತಿಸಿದರು. ಶ್ರೀ ಅರುಣ್ ಕುಮಾರ್ ಮತ್ತು ಶ್ರೀಮತಿ ಪವಿತ್ರಾ ಕೃಷ್ಣ ರಾವ್ ಕಾರ್ಯಕ್ರಮ ನಿರೂಪಿಸಿದರು. ಶ್ರೀಮತಿ ಸೌಮ್ಯ ಗೋವಿಂದರಾಜ್ ಧನ್ಯವಾದವಿತ್ತರು. ಕಾರ್ಯಕ್ರಮದ ಆರಂಭದಲ್ಲಿ ಸಭಾದ ಸದಸ್ಯರಿಂದ ಸಾಂಸ್ಕೃತಿಕ ಕಾರ್ಯಕ್ರಮವಿತ್ತು. ಸಭೆಯ ನಂತರ ಭೋಜನದೊಂದಿಗೆ ವಾರ್ಷಿಕೋತ್ಸವ ಕೊನೆಗೊಂಡಿತು.

### 2017–18ನೇ ಸಾಲಿನಲ್ಲಿ ಶ್ರೀ ಶಾರದಾ ಪತ್ರಿಕೆಯ ಅಂಚೆ ರವಾನೆ ಕೆಲಸಕ್ಕೆ ಪ್ರಾಯೋಜಕತ್ವವನ್ನು ನೀಡಿ ಸಹಕರಿಸಿದ ಮಹನೀಯರಿಗೆ ಕೃತಜ್ಞತೆಗಳು

- ಶ್ರೀ ಉಮೇಶ್ ರಾವ್ ಕೆ.
- ಶ್ರೀ ಅಜಿತ್ ಎಲ್ಲೂರು
- ಶ್ರೀ ವೈ.ಮೋಹನ ರಾವ್
- ಶ್ರೀಮತಿ ವೀಣಾ.ಜೆ.ರಾವ್
- ಶ್ರೀ ಎ.ವಿ. ರಾವ್
- ಡಾ। ವೈ.ಸುದರ್ಶನ ರಾವ್
- ಶ್ರೀ ಎಸ್.ಎಮ್.ರಾವ್
- ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಮಂಡಳಿ ಕುಂಜಿಬೆಟ್ಟು, ಉಡುಪಿ
- ಶ್ರೀ ಕೆ.ಸುಧಾಕರ ರಾವ್
- ಶ್ರೀ ವೆಂಕಟ್‌ರಾವ್.ಕರಂಬಳ್ಳಿ
- ಶ್ರೀ ಹರಿಶ್ಚಂದ್ರ ರಾವ್

## ಶ್ರೀ ಕ್ಷೇತ್ರ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನಕ್ಕೆ ಲಾಲಾಜಿ ಆರ್.ಮೆಂಡನ್ ಭೇಟಿ



ಇತ್ತೀಚೆಗೆ ನಡೆದ ಕರ್ನಾಟಕ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಉಡುಪಿ ಜಿಲ್ಲೆಯ ಕಾಪು ಕ್ಷೇತ್ರದಿಂದ ಬಿಜೆಪಿ ಪಕ್ಷದಿಂದ ಗೆದ್ದಿರುವ ಶಾಸಕರಾದ ಲಾಲಾಜಿ ಆರ್.ಮೆಂಡನ್‌ರವರು ಶ್ರೀ ಕ್ಷೇತ್ರ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನಕ್ಕೆ ಭೇಟಿ ನೀಡಿದರು. ಶ್ರೀಯುತರು ಚುನಾವಣಾ ಪೂರ್ವದಲ್ಲಿಯೂ ಶ್ರೀ ಕ್ಷೇತ್ರಕ್ಕೆ ಬಂದು ದೇವರ ದರ್ಶನ ಪಡೆದು ಚುನಾವಣೆಯಲ್ಲಿ ಜಯ ಸಿಗಲಿ ಎಂದು ಶ್ರೀ ದೇವರಲ್ಲಿ ಪಾರ್ಥನೆ ಮಾಡಿರುವರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ರೈತ ಮೋರ್ಚಾದ ಪ್ರಧಾನ ಕಾರ್ಯದರ್ಶಿ, ಪಡುಬಿದ್ರಿ ಗ್ರಾಮ ಪಂಚಾಯತ್ ಸದಸ್ಯರು, ಶ್ರೀ ಕ್ಷೇತ್ರದ ಟ್ರಸ್ಟ್‌ನ ಕಾರ್ಯದರ್ಶಿಯಾಗಿರುವ ಶ್ರೀ ಶ್ರೀನಿವಾಸ ಶರ್ಮ, ಕ್ಷೇತ್ರದ ಅರ್ಚಕರು ಹಾಗೂ ಟ್ರಸ್ಟಿಯಾಗಿರುವ ಶ್ರೀ ಜಗದಾಭಿರಾಮ ಸ್ವಾಮಿ, ಶ್ರೀ ನಯನಾಭಿರಾಮ ಸ್ವಾಮಿ, ಶ್ರೀ ಅಮರಾಭಿರಾಮ ಸ್ವಾಮಿ, ಶ್ರೀ ಪಿ.ಎ.ಶೇಖರ ರಾವ್, ಶ್ರೀ ದಿವಾಕರ್ ರಾವ್ ಜತೆಯಲ್ಲಿದ್ದರು.

## ಪಾದೆಬೆಟ್ಟು ದೇವಸ್ಥಾನದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳು



ಕಳೆದ ಒಂದು ವರ್ಷದಿಂದ ಉಡುಪಿ ಪಡುಬಿದ್ರಿಯ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇಗುಲದಲ್ಲಿ ಭಕ್ತರ ಸಹಕಾರದಿಂದ ಹಲವಾರು ಅಭಿವೃದ್ಧಿ ಕಾಮಗಾರಿಗಳು ನೆರವೇರಿವೆ. ಸುಮಾರು ರೂ.18 ಲಕ್ಷ ವೆಚ್ಚದಲ್ಲಿ ಇಡೀ ದೇವಸ್ಥಾನಕ್ಕೆ ತಗಡು ಚಪ್ಪರವನ್ನು ಹಾಕಲಾಗಿದೆ. ಇತ್ತೀಚೆಗೆ ಕರ್ನಾಟಕ ಬ್ಯಾಂಕ್ ಪ್ರಧಾನ ಕಛೇರಿಯಿಂದ ರೂ.1 ಲಕ್ಷ ಮೌಲ್ಯದ ಸಿ.ಸಿ.ಕೆಮರಾ ಸಮರ್ಪಿಸಲಾಯಿತು. ಈ ಸಂದರ್ಭದಲ್ಲಿ ತಂತ್ರಿ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿ, ಕರ್ನಾಟಕ ಬ್ಯಾಂಕ್‌ನ ಡಿಜಿಎಮ್ ಹೆಚ್.ಪಿ. ರವೀಂದ್ರನಾಥ ಹಂದೆ, ಮೊಕ್ತೇಸರ ಜಯರಾಮ ರಾವ್, ಎಂ.ಕೆ. ದಿವಾಕರ ರಾವ್, ಎಂ.ಕೆ. ಮೋಹನ ರಾವ್, ದೇವರಾಯ ಶರ್ಮ ಮೊದಲಾದವರು ಉಪಸ್ಥಿತರಿದ್ದರು. ಪಾದೆಬೆಟ್ಟು ದೇವಸ್ಥಾನದಲ್ಲಿ ವೈದಿಕ ಶಿಬಿರವು ನಡೆದ ಸಂದರ್ಭದಲ್ಲಿ ಡಾ। ವೈ. ಸುದರ್ಶನ್ ರಾವ್‌ರವರು ಶುದ್ಧೀಕರಿಸಿದ ಕುಡಿಯುವ ನೀರಿನ ಘಟಕವನ್ನು ದೇವಸ್ಥಾನಕ್ಕೆ ಕೊಡುಗೆಯಾಗಿ ನೀಡಿದರು. ಸಹಕಾರವಿತ್ತ ಎಲ್ಲ ಭಕ್ತಾಭಿಮಾನಿಗಳಿಗೆ ಆಡಳಿತ ಮಂಡಳಿಯವರು ಧನ್ಯವಾದಗಳನ್ನು ಸಮರ್ಪಿಸಿದ್ದಾರೆ.



**2017–18ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ರಾಜ್ಯಮಟ್ಟದಲ್ಲಿ ದ್ವಿತೀಯ ಸ್ಥಾನಿಯಾಗಿ (624/625 ಅಂಕ) ಕೀರ್ತಿ ತಂದಿರುವ ಮೈಸೂರಿನ ಸದಿವ್ಯಾ ಪ್ರೌಢಶಾಲೆಯ ವಿದ್ಯಾರ್ಥಿನಿ ಕು। ಅದಿತಿ ರಾವ್ (ಮೈಸೂರಿನಲ್ಲಿ ವಾಸ್ತವ್ಯದಲ್ಲಿರುವ ಚಿಟ್ಪಾಡಿ ಅಶೋಕ್ ರಾವ್ ಹಾಗೂ ಶ್ರೀಮತಿ ಆಶಾ ದಂಪತಿಗಳ ಪುತ್ರಿ) ಇವರನ್ನು ಉಡುಪಿಯ ಶಾರದಾ ಮಂಟಪದಲ್ಲಿ ಉಡುಪಿಯ ಶ್ರೀ ಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರ ವತಿಯಿಂದ ಶಾಲು, ಹಾರ, ಫಲ, ಪುಷ್ಪ, ಸ್ಮರಣಿಕೆಯೊಂದಿಗೆ ಗೌರವಿಸಲಾಯಿತು. ವೇದಿಕೆಯಲ್ಲಿ ಗಣ್ಯರಾದ ಶ್ರೀ ಯಂ.ಆರ್.ವಾಸುದೇವ್, ಶ್ರೀ ಸಿ.ಎಸ್.ರಾವ್, ಶ್ರೀ ಕೃಷ್ಣಮೂರ್ತಿ ರಾವ್ ಮತ್ತು ಶ್ರೀ ಶಾರದಾ ಯಕ್ಷಗಾನ ಕಲಾವಿದರು ಇದರ ಸದಸ್ಯರು ಉಪಸ್ಥಿತರಿದ್ದರು.**

**With Best Compliments From :**




9845084866, 9880742159, 9886199769
1st Floor, New Milagres Mansion, Falnir Road, Mangalore - 575001
info@landtrades.in
sales@landtrades.in
Ph: 0824 2425424
www.landtrades.in
CRISIL DA3+

Owned, Published & Edited by : Sri Y. Muralikrishna Rao onbehalf of Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org